ಐಕ್ಯರಂಗ

ವಾರ ಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 1 ರಿಂದ 7 ಫೆಬ್ರವರಿ 12, 1984 ಬೆಲೆ 60 ಪೈಸೆ

ಫೆಬ್ರವರಿ 13 ರಂದು

ಬೇಡಿಕೆ ದಿನಾಚರಣೆಯೊಂದಿಗೆ ದೇಶವ್ಯಾಪೀ ಆಂದೋಲನ ಆರಂಭ

ಜನವರಿ 13 ರಿಂದ 15 ರವರೆಗೆ ಕಲಕತ್ತೆಯಲ್ಲಿ ಜರುಗಿದ ವಿರೋಧ ಪಕ್ಷಗಳ ನಾಲ್ಕನೇ ಸಭೆ ಕೇಂದ್ರದ ಕಾಂಗ್ರೆಸ್ (ಐ) ಸರಕಾರದ ದುರಾಡಳಿತ ಹಾಗೂ ಕುತಂತ್ರಗಳ ವಿರುದ್ಧ ಒಂದು ರಾಷ್ಟ್ರವ್ಯಾಪಿ ಸಾಮೂಹಿಕ ಕಾರ್ಯಾಚರಣೆಯನ್ನು ರೂಪಿಸಬೇಕೆಂದು ನಿರ್ಧರಿಸಿತ್ತು. ಅದನ್ನು ಕಾರ್ಯ ರೂಪಕ್ಕಿಳಿಸುವ ಬಗ್ಗೆ ಚರ್ಚಿಸಲು ಜನವರಿ 27ರಂದು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದ 17 ವಿರೋಧ ಪಕ್ಷಗಳ ಮುಂದಾಳುಗಳು ಸಭೆ ಸೇರಿ ಫೆಬ್ರವರಿ 13 ರಂದು ದೇಶಾದ್ಯಂತ 'ಬೇಡಿಕೆಗಳ ದಿನ' ವನ್ನು ಆಚರಿಸುವುದರೊಂದಿಗೆ ಈ ಆಂದೋಲನವನ್ನು ಆರಂಭಿಸಬೇಕೆಂದು ನಿರ್ಧರಿಸಿದ್ದಾರೆ. ಆ ದಿನ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಇತರೆಡೆಗಳಲ್ಲಿ ಬಹಿರಂಗ ಸಭೆ ಏರ್ಪಡಿಸಿ ದೇಶವನ್ನು ಈಗ ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಕಲ್ಕತ್ತಾ ಸಮ್ಮೇಳನ ಕೈಗೊಂಡ ನಿರ್ಣಯಗಳನ್ನು ಜನತೆಗೆ ವಿವರಿಸಲಾಗುವುದು

ಈ ಸಾಮೂಹಿಕ ಆಂದೋಲನದ ಎರಡನೆಯ ಹಂತವಾಗಿ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸಲಾಗುವುದು. ಅಂತಿಮವಾಗಿ ಮಾರ್ಚ್ ತಿಂಗಳ ಕೊನೆಯಲ್ಲಿ ಅಖಿಲ ಭಾರತ ಸಮಾವೇಶವೊಂದನ್ನು ದಿಲ್ಲಿಯಲ್ಲಿ ನಡೆಸಬೇಕೆಂದು ನಿರ್ಧರಿಸಲಾಗಿದೆ.

ಈ ಕಾರ್ಯಕ್ರಮದ ಯಶಸ್ಸು ದೇಶದಲ್ಲಿ ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸಿ, ಜನಸಾಮಾನ್ಯರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಪಡೆಯುವಲ್ಲಿ ನೆರವಾಗುವುದರಲ್ಲಿ ಸಂಶಯವಿಲ್ಲ

ಕಲಕತ್ತೆಯಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಆಶ್ರಯದಲ್ಲಿ ಜನವರಿ 13 ರಿಂದ 15 ರವರೆಗೆ ನಡೆದ ವಿರೋಧ ಪಕ್ಷಗಳ ನಾಲ್ಕನೇ ಸಮ್ಮೇಳನದಲ್ಲಿ 17 ವಿರೋಧ ಪಕ್ಷಗಳು ಹಾಗೂ ಪಶ್ಚಿಮ ಬಂಗಾಳ, ತ್ರಿಪುರಾ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಜಮ್ಮು ಕಾಶ್ಮೀರದ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಸಿ.ಪಿ.ಐ (ಎಂ), ಸಿ.ಪಿ.ಐ., ಫಾರ್ವರ್ಡ್ ಬ್ಲಾಕ್, ಆರ್.ಎಸ್. ಪಿ, ಪಿ. ಡಬ್ಲ್ಯು ಪಿ, ಜನತಾ, ಡಿ.ಎಸ್.ಪಿ., ಕಾಂಗ್ರೆಸ್ (ಎಸ್), ಕಾಂಗ್ರೆಸ್ (ಜೆ), ಜನವಾದಿ ಪಕ್ಷ, ರಾಷ್ಟ್ರೀಯ ಕಾಂಗ್ರೆಸ್, ರಿಪಬ್ಲಿಕನ್ ಪಕ್ಷ (ಖೋಬ್ರಾಗಡೆ), ರಿಪಬ್ಲಿಕನ್ ಪಕ್ಷ (ಗವಾಯಿ), ತೆಲುಗು ದೇಶಂ, ನ್ಯಾಶನಲ್ ಕಾನ್ಫರೆನ್ಸ, ಅಕಾಲಿದಳ ಹಾಗೂ ಡಿ.ಎಂ.ಕೆ. ಇವು ಸಮ್ಮೇಳನದಲ್ಲಿ ಭಾಗವಹಿಸಿದ ವಿರೋಧ ಪಕ್ಷಗಳು

ಆರ್ಥಿಕ ನಿರ್ಣಯ

ಈ ಸಮ್ಮೇಳನದ ವಿಶಿಷ್ಟ ಸಾಧನೆಯೆಂದರೆ ತನ್ನ ಪ್ರಮುಖ ನಿರ್ಣಯದಲ್ಲಿ ದೇಶಾದ್ಯಂತ ನಮ್ಮ ಲಕ್ಷಗಟ್ಟಲೆ ಜನರನ್ನು ಒಂದು ಸಾಮೂಹಿಕ ಆಂದೋಳನಕ್ಕೆ ತಯಾರು ಮಾಡಲು ಅದು ಕೊಟ್ಟಿರುವ ಕರೆ. ಲೋಕಸಭಾ ಚುನಾವಣೆ ಸದ್ಯದಲ್ಲೇ ಬರಲಿದೆ, ಬರಲಿದೆ ಎಂದು ನಾನಾ ರೀತಿಯ ಊಹಾಪೋಹದಲ್ಲಿ ತೊಡಗಿರುವ ರಾಷ್ಟ್ರೀಯ ಪತ್ರಿಕೆಗಳು ಮತ್ತು ಬಿ.ಜೆ.ಪಿ ಲೋಕದಳದಂತಹ ಪಕ್ಷಗಳು ರಾಜಕೀಯವೆಂದರೆ ಚುನಾವಣೆಯನ್ನು ಗೆಲ್ಲುವುದಷ್ಟೆ ಎಂದು ಪರಿಗಣಿಸಿರುವ ಪರಿಸ್ಥಿತಿಯಲ್ಲಿ, ಕಲ್ಕತ್ತಾ ಸಮ್ಮೇಳನದ ಕರೆ ನಿಜವಾಗಿಯೂ ಒಂದು ವಿಶಿಷ್ಟ ಬೆಳವಣಿಗೆ. ಕಳೆದ ಮೇ ತಿಂಗಳಲ್ಲಿ ವಿಜಯವಾಡಾದ ಮೊದಲ ಸಮ್ಮೇಳನದೊಂದಿಗೆ ಆರಂಭವಾದ ವಿರೋಧ ಪಕ್ಷಗಳ ಸಮ್ಮೇಳನಗಳ ಇತಿಹಾಸದಲ್ಲಿ ಇದೊಂದು ಹೊಸ ಅಧ್ಯಾಯ

ಸಮ್ಮೇಳನ ಅಂಗೀಕರಿಸಿದ ಮಹತ್ವಪೂರ್ಣ ಆರ್ಥಿಕ ನಿರ್ಣಯದಲ್ಲಿ "ಕೆಲಸ ಮಾಡಿ ತೋರಿಸುವ ಸರಕಾರ" ಕೊಡುತ್ತೇನೆಂದು ಮತದಾರರಿಗೆ ವಚನವಿತ್ತು ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಸರಕಾರ ಅವು ಯಾವುದನ್ನೂ ಪಾಲಿಸಿಲ್ಲ ಮಾತ್ರವಲ್ಲ, ಈ ನಾಲ್ಕು ವರ್ಷ ಕಳೆದ ಮೇಲೂ ಅವನ್ನು ಪಾಲಿಸುವ ಲಕ್ಷಣಗಳೂ ಕಾಣ ಬರುತ್ತಿಲ್ಲ ಎಂದು ಟೀಕಿಸಿದೆ. ಜನತೆಯ, ದೇಶದ ಸಮಸ್ಯೆಗಳು ಬಗೆಹರಿಯುವ ಬದಲು ದಿನೇ ದಿನೇ ಹದಗೆಡುತ್ತಿರುವುದನ್ನು, ದೇಶದ ಹಿತ ಬಯಸುವ ಯಾವ ಪಕ್ಷವೂ, ಸಂಘಟನೆಯೂ, ವ್ಯಕ್ತಿಯೂ ಮೂಕರಾಗಿ ನೋಡುತ್ತಾ ಕೂರಲು ಸಾಧ್ಯವಿಲ್ಲ ಎಂದು ನಿರ್ಣಯ ಹೇಳುತ್ತದೆ.

ಕೇಂದ್ರದ ಕಾಂಗ್ರೆಸ್ (ಐ) ಸರಕಾರದ ವೈಫಲ್ಯಗಳನ್ನು ವಿಶ್ಲೇಷಿಸಿರುವ ನಿರ್ಣಯ ಜನಸಾಮಾನ್ಯರ ಜೀವನವನ್ನು ದಿನೇ ದಿನೇ ಇನ್ನಷ್ಟು ದುರ್ಭರಗೊಳಿಸುತ್ತಿರುವ ಬೆಲೆಯೇರಿಕೆ, ನಿರುದ್ಯೋಗ ಇತ್ಯಾದಿ ಸಮಸ್ಯೆಗಳಿಗೆ ಕಾಂಗ್ರೆಸ್ (ಐ) ನ ಆರ್ಥಿಕ ಹಾಗೂ ಕೈಗಾರಿಕಾ ಧೋರಣೆಗಳು ಕಾರಣ ಎಂದು ಅಭಿಪ್ರಾಯ ಪಟ್ಟಿದೆ. ಉತ್ತಮ ಬೆಳೆ ಬಂದರೂ ಅವುಗಳ ಬೆಲೆ ಇಳಿಯಲಿಲ್ಲ, ಬದಲಾಗಿ ಇನ್ನಷ್ಟು ಏರುತ್ತಿದೆ; ಕೆಲವೊಮ್ಮೆ ದಾಸ್ತಾನಿನಿಂದ ಬಿಡುಗಡೆ ಮಾಡುವ ವಿಧಾನದಿಂದಾಗಿಯೇ ಬೆಲೆಯೇರುತ್ತಿದೆ. ಕೈಗಾರಿಕಾ ರಂಗದಲ್ಲಿ ಐ.ಎಮ್.ಎಫ್. ಸಾಲದ ಶರತ್ತು ಪಾಲಿಸಲು ಲಂಗು ಲಗಾಮಿಲ್ಲದೆ ಆಮದು ಮಾಡಿ ಕೊಳ್ಳಲಾಗುತ್ತಿದೆ. ಸಣ್ಣ ಕೈಗಾರಿಕೆಗಳಿಗೆ, ಗುಡಿಕೈಗಾರಿಕೆಗಳಿಗೆ ಮೀಸಲಿರಿಸಿದ ಉದ್ಯಮಗಳನ್ನು ಗುತ್ತೇದಾರಿಗಳಿಗೆ, ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ತೆರೆಯಲಾಗುತ್ತಿದೆ ಲಕ್ಷಗಟ್ಟಲೆ ಜನರಿಗೆ ಸ್ವಲ್ಪ ವಾದರೂ ಕೆಲಸ ನೀಡುತ್ತಿದ್ದ 'ಕೂಲಿಗಾಗಿ ಕಾಳು' ಯೋಜನೆ ರದ್ದಾಗಿದೆ.

ಗೋಸುಂಬೆ ನೀತಿ

ಕಾಂಗ್ರೆಸ್ (ಐ) ನ ಗೋಸುಂಬೆತನದ ಕಡೆಗೆ ನಿರ್ಣಯ ಜನರ ಗಮನ ಸೆಳೆದಿದೆ. ಒಂದೆಡೆ ಕಾಂಗ್ರೆಸ್ (ಐ) ಭೂ ಸುಧಾರಣೆಯ ಮಾತಾಡುತ್ತಿದ್ದರೆ, ಇನ್ನೊಂದೆಡೆ ರಾಜ್ಯ ವಿಧಾನ ಮಂಡಲಗಳು ಅಂಗೀಕರಿಸಿದ ಭೂ ಸುಧಾರಣಾ ಮಸೂದೆಗಳಿಗೆ ಒಪ್ಪಿಗೆ ಕೊಡದೆ ತಡೆ

(8ನೇ ಪುಟ ನೋಡಿ)

ಕಾ. ದೇಸರಾಜ ಚಡ್ಡ ಅವರಿಗೆ ದುಃಖಾಂಜಲಿ

ಕೇಂದ್ರ ಸಮಿತಿ ಸದಸ್ಯರಾದ ಕಾ. ದೇಶರಾಜ ಚಡ್ಡ ಅವರು ಶನಿವಾರ 28-12-84 ರಂದು ರಾತ್ರಿ ಸಾವನ್ನಪ್ಪಿಕೊಂಡರು ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ವರ್ಗದ ಚಳುವಳಿಗಾಗಿ ಮುಡುಪಾಗಿಟ್ಟ ನಿಷ್ಠೆಯ ಹಾಗು ತ್ಯಾಗಮಯ ಸೇವೆಯಿಂದಾಗಿ ಕಾ. ಚಡ್ಡ ಅವರ ಆರೋಗ್ಯದ ಮೇಲೆ ಹಾನಿಕರ ಪರಿಣಾಮ ಬೀರಿತ್ತು. ಕಳೆದ ಕೆಲವು ವರ್ಷಗಳಿಂದ ಅವರು ಕಾಯಂ ರೀತಿಯ ಕಫರೋಗದಿಂದ (ಕ್ರಾನಿಕ್ ಬ್ರಾಂಕೈಟಿಸ್) ಬಳಲುತ್ತಿದ್ದರು ಕಳೆದ ಕೆಲವು ತಿಂಗಳಿಂದ ಅವರು ಈ ರೋಗದಿಂದಾಗಿ ಬಹಳ ಮಾನಸಿಕ ತೊಂದರೆಗೀಡಾಗಿದ್ದರು. ಕೊನೆಗೆ ಸಂಕಟ ತಾಳಲಾರದೆ ಅಸು ನೀಗಿದರು ಆಗ ಅವರಿಗೆ 72 ವರ್ಷ ವಯಸ್ಸು.

1935 ರಲ್ಲಿ ಕಾ ದೇಸರಾಜ ಚಡ್ಡ ಅವರು ಪಂಜಾಬಿನಲ್ಲಿ ವಿದ್ಯಾರ್ಥಿ ಚಳುವಳಿಯಲ್ಲಿ ಸೇರಿಕೊಂಡರು. ಕಮ್ಯೂನಿಸ್ಟ್ ಪಾರ್ಟಿ ಮೇಲೆ ಪ್ರತಿ ಬಂಧ ಇದ್ದಾಗ 1938 ರಲ್ಲಿ ಅವರು ಪಾರ್ಟಿ ಸೇರಿದರು. 1939 ರಿಂದ ಪಂಜಾಬ್ ಪ್ರಾಂತೀಯ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರು. 1940ರ ಕೊನೆಯಲ್ಲಿ ಅವರ ಬಂಧನವಾಯಿತು. ಬಂಧನದಲ್ಲಿದ್ದಾಗ ಲಾಹೋರ ಕೆಂಪು ಕೋಟೆಯಲ್ಲಿ ಬ್ರಿಟಿಷರು ಇವರ ಮೇಲೆ ಅತ್ಯಾಚಾರ ನಡೆಸಿದರು ಒಬ್ಬ ನಿಷ್ಠಾವಂತ ತಿಳುವಳಿಕೆಯುಳ್ಳ ಕಮ್ಯುನಿಸ್ಟರಾಗಿ ಪಾರ್ಟಿಯ ಗುಪ್ತ ವಿಚಾರಗಳ ಕುರಿತು ಒಂದೇ ಒಂದು ಶಬ್ದವನ್ನು ಕೂಡ ಬಿಚ್ಚಲಿಲ್ಲ ಎರಡನೇ ಮಹಾ ಯುದ್ಧದ ಪೂರ್ಣಾವಧಿಯಲ್ಲಿ ಇವರು ಜೈಲುವಾಸ ಅನುಭವಿಸಿದರು.

1948 ರಲ್ಲಿ ಇವರು ಪಾರ್ಟಿಯ ಪಂಜಾಬ ಪ್ರಾಂತೀಯ ಕಮಿಟಿಗೆ ಆರಿಸಲ್ಪಟ್ಟರು. 1951 ರಲ್ಲಿ ಸೆಕ್ರೆಟರಿಯೇಟ್ ಸದಸ್ಯರಾದರು 1948 ರಿಂದ 1952 ರ ವರೆಗೆ ಪಾರ್ಟಿಯ ಮೇಲೆ ಆಕ್ರಮಣ ನಡೆಯುತ್ತಿದ್ದಾಗ ಇವರು ಗುಪ್ತವಾಗಿ ಕೆಲಸ ಮಾಡುತ್ತಿದ್ದರು.

ಭಾರತ ಕಮ್ಯುನಿಸ್ಟ್ ಚಳುವಳಿಯಲ್ಲಿ ಪರಿಷ್ಕರಣವಾದದ ವಿರುದ್ಧ ಹೋರಾಟ ನಡೆದಾಗ, ದೇಸರಾಜ ಅವರು ಪರಿಷ್ಕರಣವಾದದ ವಿರುದ್ಧ ದೃಢ ನಿಲುವು ತಾಳಿದ್ದರು ಭಾರತ—ಚೀನಾ ಯುದ್ಧ ನಡೆದಾಗ 1962-63 ರಲ್ಲಿ ಇವರು ಬಂಧನದಲ್ಲಿದ್ದರು ಅವರ ಬಿಡುಗಡೆಯಾದ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಜವಾಬ್ದಾರಿಯನ್ನು ಇವರು ಹೊತ್ತರು ಏಳನೇ ಪಾರ್ಟಿ ಕಾಂಗ್ರೆಸ್ ಆದ ಕೂಡಲೇ 1965-66 ರಲ್ಲಿ ಇವರನ್ನು ಮತ್ತೆ ಬಂಧಿಸಲಾಯಿತು.

ಪಾರ್ಟಿಯ ಎಂಟನೇ ಕಾಂಗ್ರೆಸ್ಸಿನಲ್ಲಿ ಕಾ. ದೇಸರಾಜ ಕೇಂದ್ರ ಸಮಿತಿಗೆ ಆಯ್ಕೆಯಾದರು ಅನಂತರ ಪ್ರತಿಯೊಂದು ಕಾಂಗ್ರೆಸ್ಸಿನಲ್ಲಿಯೂ ಇವರನ್ನು ಆಯ್ಕೆ ಮಾಡಲಾಯಿತು. ಹಲವಾರು ವರ್ಷ ಇವರು ಕೇಂದ್ರ ಕಂಟ್ರೋಲ್ ಕಮಿಶನಿನ ಸದಸ್ಯರಾಗಿದ್ದರು

ಐವತ್ತು ವರ್ಷ ಕಾಲ ಕಾ. ದೇಸರಾಜ ಅವರು ನಿಸ್ವಾರ್ಥ ದೃಷ್ಟಿಯಿಂದ ಸಲ್ಲಿಸಿದ ಸೇವೆಯನ್ನೂ, ತ್ಯಾಗವನ್ನೂ ಪಾಲಿಟ್‌ಬ್ಯೂರೋ ಪ್ರಶಂಸೆ ಮಾಡುತ್ತದೆ. ನಿಷ್ಠಾವಂತ ಕಮ್ಯೂನಿಸ್ಟ್ ಜೀವನ ಅವರದಾಗಿತ್ತು ಅವರ ಅಕಾಲಿಕ ಮರಣಕ್ಕೆ ಪಿ ಬಿ ತನ್ನ ಅಪಾರ ದುಃಖವನ್ನು ವ್ಯಕ್ತ ಮಾಡಿ, ಅವರ ಸಂಬಂಧಿಕರ ಶೋಕದಲ್ಲಿ ಪಾಲ್ಗೊಳ್ಳುತ್ತದೆ.

ಸಿ. ಪಿ. ಐ (ಎಂ) ಕರ್ನಾಟಕ ರಾಜ್ಯ ಸಮಿತಿ, ಸಿಐಟಿಯು, ಪ್ರಾಂತ ರೈತ ಸಂಘ ಹಾಗೆಯೇ ಡಿ. ವೈ. ಎಫ್. ಐ ಮತ್ತು ಎಸ್. ಎಫ್ ಐ ಗಳೆಲ್ಲ ಕಾ. ದೇಸರಾಜ ಚಡ್ಡ ಅವರ ಅಕಾಲಿಕ ಅಗಲುವಿಕೆಗೆ ತಮ್ಮ ಅಪಾರ ಸಂತಾಪವನ್ನು ವ್ಯಕ್ತ ಮಾಡಿದ್ದಾರೆ

ಐಕ್ಯರಂಗವೂ ತನ್ನ ದುಃಖವನ್ನು ಪ್ರದರ್ಶಿಸುತ್ತದೆ.

ಓದುಗರಲ್ಲಿ ವಿನಂತಿ.

ಅನಾನುಕೂಲತೆಗಳಿಂದಾಗಿ ಓದುಗರಿಗೆ ಕಳೆದ ಕೆಲವು ವಾರಗಳಿಂದ ಐಕ್ಯರಂಗ ಒದಗಿಸಲು ಸಾಧ್ಯವಾಗಲಿಲ್ಲ. ಇನ್ನು ಮುಂದೆ ಹಾಗಾಗದಂತೆ ನೋಡಿ ಕೊಳ್ಳಲಾಗುವುದು.

ಸಂಪಾದಕ ಮಂಡಳಿ.

ಕರ್ನಾಟಕ ರಾಜ್ಯದಲ್ಲಿ

ಕನ್ನಡ ಭಾಷೆ ಮತ್ತು ಡಾ|| ರಾಜಕುಮಾರ್

—ಎನ್. ಕೆ. ಉಪಾಧ್ಯಾಯ

ಕನ್ನಡ ಭಾಷೆಯ ಪ್ರಶ್ನೆಯನ್ನೆತ್ತಿ ಮತ್ತೆ ಚಳುವಳಿ, ಬಂದ್ ಪ್ರಾರಂಭವಾಗಿದೆ. ಈ ಸಲ ಡಾ|| ರಾಜಕುಮಾರ್ ಮತ್ತು, ಅವರ ಅಭಿಮಾನಿಗಳ ಮುಖಂಡತ್ವ. ಈ ಚಳುವಳಿಯಲ್ಲಿ ಮೂವರು ಪ್ರಾಣ ತೆತ್ತರು ಇವರ ಚಳುವಳಿಯ ಹಿನ್ನೆಲೆ ಹುಡುಕಾಡಿ ತೆಗೆದಾಗ ಇವರ ಚಳುವಳಿ ಅರ್ಥ ಹೀನವೆಂದು ಸ್ಪಷ್ಟವಾಗುತ್ತದೆ.

ಕನ್ನಡ ಭಾಷೆಯ ಅಭಿಮಾನ ತಮ್ಮದೇ ಗುತ್ತಿಗೆಯಾಗಿದೆಂಬ ರೀತಿಯಲ್ಲಿ ಡಾ|| ರಾಜ ಕುಮಾರ್ ಮತ್ತು ಅವರ ಅಭಿಮಾನಿಗಳು ಹೇಳಿ ಕೊಳ್ಳುವಂತೆ ಕಾಣುತ್ತದೆ. ತಮ್ಮ ಜೀವ ಬಲಿದಾನ ಮಾಡಲೂ ಸಿದ್ಧವೆಂದೂ ಹೇಳುತ್ತಿದ್ದಾರೆ. ಕನ್ನಡಕ್ಕಾಗಿ ಬಲಿದಾನ ಮಾಡಲು ತಾವೂ ಸಿದ್ಧ, ಹಾಗೆಯೇ ಅಲ್ಪಮತಸ್ತರಾದ ಅಜೀಜ್ ಸೇಠ್‌ರೂ, ಫಾದರ್ ಜೇಕಬ್‌ರೂ ಸಿದ್ಧವೆಂದು ವಿಧಾನ ಸಭೆಯಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಘೋಷಿಸಿದ್ದಾರೆ. ಹೆಗಡೆ ಸರಕಾರವನ್ನು ಉರುಳಿಸುವ ಕುತಂತ್ರವನ್ನು ಕಾಂಗ್ರೆಸ್ಸಿನವರು ತೀವ್ರಗೊಳಿಸುತ್ತಿರುವಾಗಲೇ ಡಾ|| ರಾಜಕುಮಾರ್ ಬೆಂಬಲಿಗರ ಈ ಚಳುವಳಿ ನಡೆಯುತ್ತಿರುವುದನ್ನು ನೋಡುವಾಗ ಕನ್ನಡ ಅಭಿಮಾನಕ್ಕಿಂತಲೂ ಜನತಾ ಸರಕಾರ ಉರುಳಿಸುವುದೇ ಪ್ರಧಾನ ಗುರಿಯಾಗಿತ್ತೆಂದು ಊಹಿಸಿದರೆ ತಪ್ಪೇನಾಗಲಿಕ್ಕಿಲ್ಲ.

"ಸಿ" ಮತ್ತು "ಬಿ" ಸರಕಾರಿ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಕನ್ನಡ ಗೊತ್ತಿದ್ದವರನ್ನೇ ಮಾಡಬೇಕೆಂದು ಈ ಚಳುವಳಿಗಾರರಪಟ್ಟು. ಅಲ್ಪಸಂಖ್ಯಾತರನ್ನೂ ಇತರ ಭಾಷಕರನ್ನೂ ನೇಮಿಸಿಕೊಂಡ 2 ವರ್ಷಗಳಲ್ಲಿ ಅವರು ಕನ್ನಡ ಕಲಿಯಬೇಕೆಂದೂ, ಕನ್ನಡ ಕಲಿತರೆ ಮಾತ್ರ ಅಂಥವರನ್ನು ನೌಕರಿಯಲ್ಲಿ ಕಾಯಂ ಮಾಡಲಾಗುವುದೆಂದು ಹೆಗಡೆ ಸರಕಾರದ ವಾದ.

ಕನ್ನಡ ಕಡ್ಡಾಯವಾಗಿ ಕಲಿಯಬೇಕೆಂಬ ಹಿಂದಿನ ಸರಕಾರದ ಆಜ್ಞೆಯನ್ನು ರದ್ದು ಪಡಿಸಿ ಕನ್ನಡಕ್ಕೆ ಅನ್ಯಾಯ ಬಗೆಯಲಾಗಿದೆಂದು ಚಳುವಳಿಗಾರರ ವಾದ. ಆದರೆ ಸರಕಾರಿ ಆಜ್ಞೆಗಳ ನಿಜ ರೂಪ ಯಾರಿಗೂ ಗೊತ್ತಿದ್ದಂತೆ ಕಂಡು ಬರುವುದಿಲ್ಲ ಚಳುವಳಿಯು ಕಾರ್ಪಣಿ ರೋಗದಲ್ಲಿ ಸುತ್ತಿ ಕೊಂಡಿರುವಾಗ ನಿಜವಾದ ಅರ್ಥ ಅರಿವಾಗುವುದು ದುರ್ಲಭವೇ ಸರಿ

1974 ಜನವರಿ 8 ರಂದು ಅಂದಿನ ದೇವರಾಜ ಅರಸ ಸರಕಾರ ನಾಲ್ಕನೇ ವರ್ಗವನ್ನು ಬಿಟ್ಟು ಸರಕಾರಿ ನೌಕರದಾರರು ಕನ್ನಡವನ್ನು ಕಲಿಯಲೇಬೇಕೆಂದು ಆಜ್ಞೆ ಮಾಡಿತ್ತು. ಮೂರು ವರ್ಷಗಳ ಅವಕಾಶವನ್ನೂ ನೀಡಲಾಗಿತ್ತು. ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಬಡ್ತಿ ಇಲ್ಲ ಎಂಬ ಅಂಶವೂ ಆ ಆಜ್ಞೆಯಲ್ಲಿತ್ತು.

1982 ರಲ್ಲಿ ಗುಂಡೂರಾವ್ ಸರಕಾರ ಹೊಸ ಆಜ್ಞೆಯೊಂದನ್ನು ಹೊರಡಿಸಿ ಸರಕಾರಿ ನೌಕರರು ಕೆಲಸಕ್ಕೆ ಸೇರುವ ಮುನ್ನ ಒಂದು ಸಲ ಕಾಯಂ ಆಗುವ ಮುನ್ನ ಒಮ್ಮೆ ಹೀಗೆ ಎರಡು ಸಲ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದು ತಿಳಿಸಲಾಗಿತ್ತು.

ಈ ಆಜ್ಞೆ ಹೊರಡಿಸಿದಾಗ 1974ರ ಆಜ್ಞೆಯನ್ನು ರದ್ದು ಪಡಿಸಿರಲಿಲ್ಲ.

ನವಂಬರ್ 1983 ರಲ್ಲಿ ಹೆಗಡೆ ಸರಕಾರ 1982 ರ ಗುಂಡೂರಾವ್ ಸರಕಾರದ ಆಜ್ಞೆಯನ್ನು ರದ್ದು ಪಡಿಸಿದೆ. ಕನ್ನಡ ತಿಳಿಯದವರೂ ಸರಕಾರಿ "ಬಿ" ಮತ್ತು "ಸಿ" ನೌಕರಿ ಸೇರಬಹುದು. ಆದರೆ 2 ವರ್ಷಗಳೊಳಗೆ ಕನ್ನಡ ಕಡ್ಡಾಯವಾಗಿ ಕಲಿಯಬೇಕೆಂಬುದು ಹೆಗಡೆ ಸರಕಾರದ ನಿಲುವು. ಮೇಲ್ದರ್ಜೆಯ ಅಧಿಕಾರಿಗಳಿಗೆ ಕನ್ನಡ ಕಲಿಯಲು ಕಾಲಾವಕಾಶ ಒದಗಿಸುತ್ತಿರುವಾಗ ಕೆಳದರ್ಜೆಯವರಿಗೆ ಅಂಥದ್ದೇ ಸೌಲಭ್ಯ ಒದಗಿಸುವುದರಲ್ಲಿ ತಪ್ಪೇನಿದೆಂದು ಸರಕಾರದ ವಾದ.

ಅಲ್ಪ ಭಾಷಿಕರಿಗೆ, ಅಲ್ಪ ಮತಸ್ತರಿಗೆ ಈ ರೀತಿಯ ಕಾಲಾವಕಾಶ ಕೊಡುವುದರಲ್ಲಿ ಏನೂ ತಪ್ಪಿಲ್ಲ. ಇಲ್ಲಿಯೇ ಹುಟ್ಟಿ ಬೆಳೆದವರು ಕನ್ನಡ ಕಲಿಯಲೇಬೇಕಾದ್ದು ಅವರ ಕರ್ತವ್ಯವಾಗಿತ್ತೆಂದು ಡಾ|| ರಾಜಕುಮಾರ್ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು ಇತರ ಭಾಷಿಕರ ಶಾಲೆಗಳಲ್ಲಿ ಕನ್ನಡ ಕಲಿಸುವ ಸಂಪೂರ್ಣ ವ್ಯವಸ್ಥೆ ಇಂದಿಗೂ ಸಾಧಿಸಿರುವುದಿಲ್ಲೆಂಬ ಸಂಗತಿಯನ್ನು ಶಿಕ್ಷಣ ಮಂತ್ರಿ ರಾಚಯ್ಯನವರೇ ಒಪ್ಪಿಕೊಂಡಿದ್ದಾರೆ ಅಂಥ ವ್ಯವಸ್ಥೆ ಮಾಡಬೇಕಾದ್ದು ಸರಕಾರದ ಆದ್ಯ ಕರ್ತವ್ಯ ಸರಕಾರದ ತಪ್ಪಿಗಾಗಿ ನೌಕರಿಗಾಗಿ ತಡಕಾಡುತ್ತಿರುವ ಅಲ್ಪ ಭಾಷಿಕರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ಎಲ್ಲಿ ಅವಕಾಶಗಳನ್ನೊದಗಿಸಿದರೂ ಕನ್ನಡ ಕಲಿಯಲು ನಿರಾಕರಿಸುತ್ತಿರುವವರ ಪ್ರಶ್ನೆ ಬೇರೆ.

ರಾಜ್ಯ ಭಾಷೆ ಕನ್ನಡವೇ ಆಗಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಿ ಅಧಿಕಾರಿಗಳೂ ನೌಕರರೂ ಆಯಾ ರಾಜ್ಯದ ಭಾಷೆಯನ್ನು ಕಲಿಯಲೇ ಬೇಕು ಆಡಳಿತದಲ್ಲಿ ಜನ ಸಂಪರ್ಕ ಉಂಟಾಗಲು ಇದು ಅತ್ಯಗತ್ಯ.

ಆದರೆ ಡಾ|| ರಾಜಕುಮಾರ ಮತ್ತು ಅವರ ಬೆಂಬಲಿಗರು ಹೇಳುವಂತೆ ಕನ್ನಡ ಗೊತ್ತಿದ್ದವರಿಗಷ್ಟೇ ನೌಕರಿ ಕೊಡಬೇಕೆಂಬ ವಾದವನ್ನು ಒಪ್ಪಿಕೊಳ್ಳಲು ಶಕ್ಯವಿಲ್ಲ. ಕನ್ನಡ ನಾಡಿನಲ್ಲಿ ನೆಲೆಸಿರುವ ಇತರ ಭಾಷಿಕರಿಗೂ ಸರಕಾರಿ ಆಡಳಿತೆಯಲ್ಲಿ ಪಾಲ್ಗೊಳ್ಳಲಿಕ್ಕೆ ಅವರು ಇಚ್ಛಿಸಿದರೆ ಅವಕಾಶ ಮಾಡಿ ಕೊಡುವುದು ನಮ್ಮೆಲ್ಲರ ಕರ್ತವ್ಯ. ದುರಭಿಮಾನದ ಮತ್ತು ವಿಷಯವನ್ನು ಸರಿಯಾಗಿ ತಿಳಿಯದೆ ನಡೆಸುವ ಹೋರಾಟಗಳಿಗೆ ನಮ್ಮ ಬೆಂಬಲವಿಲ್ಲ. ಜನತೆಯೂ ಬೆಂಬಲಿಸ ಬಾರದೆಂದು ನಮ್ಮ ಅನಿಸಿಕೆ.

ರೈತರ ಎರಡು ಚಳುವಳಿಗಳು

ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ರೈತರ ಎರಡು ಚಳುವಳಿಗಳು ನಡೆದವು. ರುದ್ರಪ್ಪನವರ ಅಧ್ಯಕ್ಷತೆಯಲ್ಲಿರುವ ರೈತ ಸಂಘದವರು ತಮ್ಮ ಬೇಡಿಕೆಗಳ ಸಲುವಾಗಿ ಜನವರಿ 26 ರಿಂದ ರಸ್ತೆ ರೋಕೋ ರೈಲ್ ರೋಕೋ ಚಳುವಳಿ ಮಾಡಿದರು. 8 ದಿವಸ ಚಳುವಳಿ ನಡೆದು, ಅದು ತನ್ನಂತೆ ತಾನೇ ನಿಂತು ಹೋಗುವುದನ್ನು ಕಂಡ ರೈತ ಸಂಘದ ಮುಖಂಡರು, ಫೆಬ್ರವರಿ 2 ರಂದು ಸತ್ಯಾಗ್ರಹ ನಿಲ್ಲಿಸಲಾಗಿದೆಂದು ಸಾರಿದ್ದಾರೆ.

ಹೋದ ವರ್ಷ ವಿಧಾನ ಸಭೆ ಚುನಾವಣೆ ನಡೆದಾಗ ರೈತ ಸಂಘದ ಸದಸ್ಯರು ಯಾರಿಗೂ ಮತ ಹಾಕಬಾರದೆಂದು ಕರೆ ಕೊಟ್ಟು, ಕಾಂಗ್ರೆಸನ್ನು ಸೋಲಿಸುವ ಚರಿತ್ರಾರ್ಹ ಕರ್ತವ್ಯದಲ್ಲಿ ಪಾಲ್ಗೊಳ್ಳುವುದರಲ್ಲಿ ತಪ್ಪಿತಸ್ಥರಾದರು. ತಮ್ಮ ರೈತ ಸಂಘದವರಿಗೆಲ್ಲ ಯಾರಿಗೂ ಮತ ನೀಡಬಾರದೆಂದು ಕೊಟ್ಟ ಕರೆ ಅಪ್ರತ್ಯಕ್ಷ ರೀತಿಯಲ್ಲಿ ಕಾಂಗ್ರೆಸಿಗೆ ಸಹಾಯಕವಾಗುತ್ತದೆಂಬುದನ್ನು ರುದ್ರಪ್ಪ, ನಂಜುಂಡಸ್ವಾಮಿಯವರು ತಿಳಿದು ಕೊಂಡಿಲ್ಲೆಂದು ಹೇಳುವುದು ಕಷ್ಟ. ಕಾಂಗ್ರೆಸ್ಸಿನವರು ಹೆಗಡೆ ಸರಕಾರವನ್ನು ಉರುಳಿಸಲು ಸರ್ವ ವಿಧದ ಕುತಂತ್ರಗಳನ್ನು ನಡೆಸಲು ಪ್ರಾರಂಭಿಸಿದಾಗಲೇ ಈ ರೈತ ಸಂಘದ ಮುಖಂಡರು ಜನತಾ ಸರಕಾರದ ವಿರುದ್ಧ ಪ್ರಚಾರ ಪ್ರಕ್ಷೋಭೆ ಶುರು ಮಾಡಿದರು. ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿಯವರು "ಹೆಗಡೆ ಸರಕಾರವನ್ನು ಉರುಳಿಸಿರಿ" ಎಂದು ಹೇಳುತ್ತಿರುವಾಗಲೇ, ರೈತ ಮುಖಂಡರಾದ ನಂಜುಂಡಸ್ವಾಮಿ, ಸುಂದರೇಶ ಅವರುಗಳು "ಹೆಗಡೆ ಹಟಾವೊ" ಎಂಬ ಘೋಷಣೆ ಕೂಗಿದರು. ರೈತ ಮುಖಂಡರ ಜೊತೆ ಚರ್ಚಿಸಲು ತಯಾರಿದ್ದೇನೆಂದು ಹೆಗಡೆಯವರು ಕೈ ಮುಗಿದು ವಿನಂತಿ ಮಾಡಿ ಕೊಳ್ಳುತ್ತಿದ್ದಂತೆಯೇ "ಸರಕಾರದ ಜೊತೆ ಚರ್ಚಿಸಲು ತಯಾರಿಲ್ಲ ನಮ್ಮೆಲ್ಲ ಬೇಡಿಕೆಗಳನ್ನು ಒಪ್ಪಿಕೊಂಡ ನಂತರವೇ ಚರ್ಚೆ" ಎಂಬ ಉದ್ಧಟದ ಉತ್ತರವನ್ನೇ ರುದ್ರಪ್ಪ ನಂಜುಂಡಸ್ವಾಮಿ ಕೊಡುತ್ತಿದ್ದರು.

ಕೃಷಿ ಉತ್ಪನ್ನಗಳ ಬೆಲೆ ನಿರ್ಣಯಿಸುವ ಆಯೋಗವನ್ನು ಕೇಂದ್ರ ಸರಕಾರ ನೇಮಿಸಿ ಬೆಲೆ ನಿರ್ಧರಿಸುತ್ತದೆಂಬ ವಿಷಯ ಈ ಮುಖಂಡರಿಗೆ ತಿಳಿದಿದ್ದರೂ ರಾಜ್ಯ ಸರಕಾರವೇ ಅಂಥ ಆಯೋಗ ನೇಮಿಸಬೇಕೆಂದು ಒತ್ತಾಯಿಸುವುದರಲ್ಲಿ ಅರ್ಥವಿಲ್ಲ, ಎಲ್ಲಾ ರೈತರ ಸಾಲ ಮನ್ನಾ ಮಾಡಬೇಕು ರೈತರ ಹೆಚ್ಚುವರಿ ಉತ್ಪನ್ನದ ಸಾಗಾಣಿಕೆಗೆ ಸ್ವಾತಂತ್ರ್ಯ ನೀಡಬೇಕು ಎಂಬೆಲ್ಲ ಬೇಡಿಕೆಗಳು ದೊಡ್ಡ ರೈತರಿಗಷ್ಟೇ ಲಾಭದಾಯಕವಾಗುತ್ತದಷ್ಟೇ ಅಲ್ಲ, ಸೊಸೈಟಿಗಳಲ್ಲಿ ಹಣವಿಲ್ಲದಂತೆ ಮಾಡಿ, ರೈತರಿಗೆ ಸಾಲ ಕೊಡುವ ವ್ಯವಸ್ಥೆಯನ್ನೇ ಗೊಂದಲಕ್ಕೀಡು ಮಾಡುವ ಬೇಡಿಕೆಯಾಗಿದೆ. ಒತ್ತುವರಿ ಭೂಮಿಯನ್ನು ಬಡ ರೈತರಿಗೆ ಹಂಚುವುದು, ಹರಿಜನ-ಗಿರಿಜನರು ಬಡ ರೈತರೆಲ್ಲ ಈಗಾಗಲೇ ಸಾಗು ಮಾಡುತ್ತಿರುವ ಭೂಮಿಯ ಪಟ್ಟಾವನ್ನು ಅವರವರಿಗೆ ಒದಗಿಸುವುದು ಮುಂತಾದ ಬೇಡಿಕೆಗಳಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘ, ಹೋರಾಟ ನಡೆಸುತ್ತಿದೆ ಇವುಗಳ ಕುರಿತು ಸಂಯುಕ್ತ ಹೋರಾಟ ನಡೆಸಲು. ರುದ್ರಪ್ಪನವರ ರೈತ ಸಂಘ ತಯಾರಿಲ್ಲ.

ರಸ್ತೆ ರೋಕೋ - ರೈಲ್ ರೋಕೋ ಚಳುವಳಿಯಿಂದಾಗಿ ನಾಗರೀಕರಿಗೆ ಅಪಾರ ತೊಂದರೆ-ಹಾನಿ ಉಂಟಾಗಿದೆ ಮೂರನೇ ದಿವಸದಿಂದ ಹಿಂಸಾಕೃತ್ಯಮಾನ ನಡೆದಿದೆ ಆದರೆ ಹೆಗಡೆ ಸರಕಾರ ಅತ್ಯಂತ ಸಂಯಮದಿಂದ ವರ್ತಿಸಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ 1980-81 ರಲ್ಲಿ ರೈತರ ಮೇಲೆ ಗೋಲಿಬಾರು-ಲಾಠಿಚಾರ್ಜು ಮಾಡಿ ನೂರಾರು ರೈತರನ್ನು ಕೊಲೆ ಮಾಡಿ, ದಬ್ಬಾಳಿಕೆ ನಡೆಸಿತ್ತು.

ಈಗ 25,000 ದಷ್ಟು ಜನ ರೇಲ್ವೆ ಬಸ್ಸುಗಳನ್ನೆಲ್ಲ ತಡೆದರೂ, ಹಿಂಸಾಚಾರದಲ್ಲಿ ತೊಡಗಿದರೂ ಕೂಡ, ಒಂದು ಸಲ ಕೂಡ ಗೋಲಿಬಾರ್ ಆಗಿಲ್ಲ ಸರಕಾರ ಮತ್ತು ಪೋಲೀಸರು ಅತ್ಯಂತ ತಾಳ್ಮೆಯಿಂದ ವರ್ತಿಸಿದ್ದಾರೆಂಬುದನ್ನು ಗಮನಿಸಬೇಕಾದ್ದು ಅಗತ್ಯ

ಕರ್ನಾಟಕದ ಹೆಗಡೆ ಸರಕಾರ, ರೈತರ ಚಳುವಳಿ ಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ಕೂಡ, ಅತ್ಯಂತ ಸಂಯಮದಿಂದ ವರ್ತಿಸುತ್ತಿದ್ದಾಗ, ಇಂದಿರಾ ಕಾಂಗ್ರೆಸ್ಸಿನ ಮಹಾರಾಷ್ಟ್ರ ಸರಕಾರ ಜನವರಿ 31 ರಂದು ಎಲ್ಲ ವಿರೋಧ ಪಕ್ಷಗಳು ರೈತರ ಬೇಡಿಕೆಗಾಗಿ ಬಂದ್ ಆಚರಿಸಿದಾಗ ಗೋಲಿಬಾರ್, ಲಾಠಿ ಚಾರ್ಜ್‌ಗಳಂಥ ಕ್ರೂರ ಕೃತ್ಯಕ್ಕಿಳಿದಿರುವುದನ್ನು ನೋಡುವಾಗ ಕಾಂಗ್ರೆಸ್ ಸರಕಾರ ಮತ್ತು ಕಾಂಗ್ರೆಸ್ಸೇತರ ಸರಕಾರಗಳು ರೈತರ ಚಳುವಳಿ ಕುರಿತು ಎಂಥ ಧೋರಣೆಯನ್ನನುಸರಿಸುತ್ತಿವೆಂಬ ನಿಜ ಸಂಗತಿ ಕಂಡು ಬರುತ್ತದೆ

ರಾಯಗಢ ಜಿಲ್ಲೆಯ ಊರಾನ್ ತಾಲೂಕಿನ ಚಳುವಳಿ ನಿರತ ರೈತರಿಗೆ ಬೆಂಬಲ ಸೂಚಿಸಿ ಮಹಾರಾಷ್ಟ್ರದ ವಿರೋಧ ಪಕ್ಷಗಳು 24 ಗಂಟೆಗಳ "ಮುಂಬಯಿ ಬಂದ್" ಶಾಂತ ರೀತಿಯಿಂದಲೇ ನಡೆದಾಗ ಹಲವಾರು ಕಡೆ ಪೋಲೀಸರಿಂದ ಗೋಲೀಬಾರ್-ಲಾಠಿ ಚಾರ್ಜ್ ನಡೆದಿವೆ. ಕಾಂಗ್ರೆಸ್ ಸರಕಾರಗಳು ರೈತರ ಚಳುವಳಿಯನ್ನು ನಾಗರೀಕರ ಪ್ರತಿ ಘಟನೆಯನ್ನು ಪೋಲೀಸರ ದಬ್ಬಾಳಿಕೆಯಿಂದ ದಮನ ಮಾಡಲು ಪ್ರಯತ್ನ ಮಾಡುತ್ತಿವೆ

ದೊಡ್ಡ ಬಳ್ಳಾಪುರ ಘಟನೆ ಸರಕಾರಕ್ಕೆ ಎಚ್ಚರಿಕೆ

ಕರ್ನಾಟಕ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯ ಪದ್ಧತಿಯಿಂದಾಗಿ ಕಳೆದ ಕೆಲವು ವರ್ಷಗಳಿಂದಲೂ ಜನರೂ, ಕೈಗಾರಿಕೋದ್ಯಮಿಗಳು ಬೇಸತ್ತಿದ್ದಾರೆ.

ಮೈಸೂರು ಸಂಸ್ಥಾನ ಇದ್ದಾಗ, ಇಡೀ ದೇಶಕ್ಕೆ ಮಾದರಿಯಾಗಿದ್ದ ವಿದ್ಯುತ್ ಸರಬರಾಜು ಖಾತೆ ಕಾಂಗ್ರೆಸ್ಸಿನ ದುರಾಡಳಿತೆಯಲ್ಲಿ ಅಧೋಗತಿಗಿಳಿದಿವೆ.

ಜನತಾ ಸರಕಾರ ಅಧಿಕಾರಕ್ಕೆ ಬಂದ ನಂತರವಾದರೂ ಈ ಖಾತೆ ಸುಧಾರಿ ಸಲ್ಪಟ್ಟು ಕೈಗಾರಿಕೆಗಳಿಗೂ, ಜನರಿಗೂ ಪರಿಹಾರ ಸಿಗಬಹುದೆಂಬ ಅಪೇಕ್ಷೆ ಫಲಪ್ರದವಾಗುತ್ತಿಲ್ಲ.

ಪ್ರತಿ ದಿವಸ ಮೂರು ಘಂಟೆಯಷ್ಟೇ ಅಲ್ಲ ಸಂಜೆ 6 ರಿಂದ 9 ರವರೆಗೆ ಕಾರ್ಖಾನೆಗಳನ್ನು ನಡೆಸಬಾರದೆಂಬ ಕೆ. ಇ. ಬಿ. ಯವರ ಆಜ್ಞೆಯವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಬಿಜಾಪುರ ಜಿಲ್ಲೆ ಘಟಕ ಜನವರಿ ಪ್ರಥಮ ವಾರದಲ್ಲೇ ಸಂಬಂಧ ಪಟ್ಟ ಅಧಿಕಾರಿಗಳಿಗೂ ಮಂತ್ರಿಗಳಿಗೂ ತಕರಾರು ಅರ್ಜಿ ಕಳುಹಿಸಿತ್ತು. ಅನಿಯಮಿತ ಕಾಲದಲ್ಲಿ ವಿದ್ಯುಚ್ಛಕ್ತಿ ಕಡಿತದಿಂದಾಗಿ ಕಾರ್ಖಾನೆಗಳಿಗೂ, ಕಾರ್ಮಿಕರಿಗೂ ತೊಂದರೆ ಯಾಗುತ್ತಿದೆ, ಮುಂಜಾನೆ—ಸಂಜೆಗೆ ಕಡಿತದಿಂದಾಗಿ, ಶಾಲೆ ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೂ ಅನಾನುಕೂಲತೆಯಾಗುತ್ತದೆ. ಕಾರಣ ಅದನ್ನು ಸರಿಪಡಿಸಬೇಕೆಂದೂ ಸೂಚನೆ ಮಾಡಲಾಗಿತ್ತು ಕಾಳಿಯೋಜನೆಯ ನಾಗಝರಿಯಲ್ಲಿ ಟ್ರಾನ್ಸ್‌ಫಾರ್ಮರ್ ಕೆಟ್ಟು ಹಲವಾರು ತಿಂಗಳುಗಳಾದರೂ ಅದರ ರಿಪೇರಿಗೆ ಸಕಾಲದಲ್ಲಿ ಕ್ರಮ ತೆಗೆದುಕೊಳ್ಳದಿರುವುದು, ಕಾಳಿಯೋಜನೆಯ ಹಾಗೆಯೇ ಶರಾವತಿ ಯೋಜನೆಯ ಪೂರ್ಣಲಾಭ ಪಡೆಯಲು ಕ್ರಮ ಕೈಗೊಳ್ಳದಿರುವುದರ ಕಡೆಗೂ ಸರಕಾರದ ಗಮನ ಎಳೆಯಲಾಗಿತ್ತು. ಹಿಂದಿನ ಕಾಂಗ್ರೆಸ್ ಮಂತ್ರಿಗಳಂತೆಯೇ ಜನತಾ ಪಕ್ಷದ .ಜೆ ಎಚ್ ಪಟೇಲರೂ ಉತ್ತರ ಕೊಡುತ್ತಿದ್ದಾರಲ್ಲದೆ, ವಿದ್ಯುತ್ ಕಡಿತವನ್ನು ತೆಗೆದು ಹಾಕಲು, ಕಡಿತ ವಿದ್ದರೂ ಕೂಡ ಕಾರ್ಖಾನೆಗಳಿಗೆ ಯಾವ ಆತಂಕವಿಲ್ಲದೆ ನಿರ್ಧರಿತ ಕಾಲದಲ್ಲಿ ವಿದ್ಯುತ್ ಪೂರೈಸಲಿಕ್ಕೆ ಕೈಗೊಂಡ ಕ್ರಮಗಳನ್ನು ವಿವರಿಸದಿರುವುದು ಶುದ್ಧ ತಪ್ಪು.

ಕೆ ಇ ಬಿ ಯ ಅಸಮರ್ಪಕ ಆಡಳಿತಕ್ಕೆ ಪ್ರತಿಕ್ರಿಯೆಯಾಗಿ ಬಂದಿರುವುದು ದೊಡ್ಡಬಳ್ಳಾಪುರ ಘಟನೆ ಈ ಹೊತ್ತು ದೊಡ್ಡಬಳ್ಳಾಪುರ, ನಾಳೆ ಬಿಜಾಪುರ ನಾಳಿದ್ದು ಹುಬ್ಬಳ್ಳಿ ಹೀಗೆ

(8ನೇ ಪುಟ ನೋಡಿ)

೭೫,೦೦೦ ಪ್ಲಾಂಟೇಶನ್ ಕಾರ್ಮಿಕರ ಮುಷ್ಕರ

ತಮಗೆ ಹೆಚ್ಚಿನ ಕನಿಷ್ಠ ಕೂಲಿ ಸಿಗಬೇಕೆಂಬ ಬೇಡಿಕೆಯನ್ನು ಮುಂದೆ ಮಾಡಿ ಕರ್ನಾಟಕ ರಾಜ್ಯದ ಹಾಸನ ಚಿಕ್ಕಮಗಳೂರು, ಜಿಲ್ಲೆಗಳಲ್ಲಿಯ 75 ಸಾವಿರಕ್ಕೂ ಮೇಲ್ಪಟ್ಟ ಪ್ಲಾಂಟೇಶನ್ ಕಾರ್ಮಿಕರು ತಾ|| 19-1-84 ರಿಂದ ಆರು ದಿವಸ ಯಶಸ್ವಿಯಾದ ಮುಷ್ಕರ ನಡೆಸಿ ಪ್ಲಾಂಟರುಗಳ ಕುತಂತ್ರವನ್ನು ಸೋಲಿಸಿದರು

ತೋಟ ಕಾರ್ಮಿಕರ ಸಂಘಗಳ ಜಂಟಿ ಕ್ರಿಯಾ ಸಮಿತಿಯು (ಸಿ ಐ. ಟಿ ಯು. ಐ, ಎನ್. ಟಿ. ಯು ಸಿ, ಎ ಐ ಟಿ ಯು ಸಿ ಮತ್ತು ಯಾವ ಕೇಂದ್ರಕ್ಕೂ ಸೇರದ ಸಂಘಗಳು) ಈ ಹೋರಾಟಕ್ಕೆ ಕರೆ ಕೊಟ್ಟಿತ್ತು

ಕಾರ್ಮಿಕ ಸಚಿವರ ಮತ್ತು ಕಾರ್ಮಿಕ ಆಯುಕ್ತರ ಸಮಕ್ಷಮ ಚರ್ಚೆ ನಡೆದಾಗ ಕನಿಷ್ಠ ಕೂಲಿಯ ಪ್ರಕಟಣೆಗೆ ಕಾಯದೆ ದಿವಸಕ್ಕೆ ರೂ 9.35 ಕ್ರೋಢೀಕರಿಸಿದ ಕೂಲಿಯನ್ನು (ಅಂದರೆ ತುಟ್ಟಿ ಭತ್ಯ ಇತ್ಯಾದಿ ಸೇರಿ) ಕೊಡಬೇಕೆಂದೂ, ಹಿಂದಿನ ಅವಧಿಗೆ ಪರಿಹಾರವಾಗಿ ರೂ. 125 ಕೊಡಬೇಕೆಂದೂ ಹೇಳುವ ಕರಡನ್ನು ಮಂಡಿಸಲಾಯಿತು

ಆದರೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಈ ಕರಡನ್ನು ವಿರೋಧಿಸಿದರು ಯಾಕೆಂದರೆ ಅಂಥ ಒಪ್ಪಂದವಾದದ್ದಾದರೆ ಅದನ್ನು ಕನಿಷ್ಠಕೂಲಿಯ ಸಲಹಾ ಸಮಿತಿಯ ಮುಂದಿಟ್ಟು, ತುಟ್ಟಿ ಭತ್ತೆಯಿಲ್ಲದೆ, ಇದಕ್ಕಿಂತಲೂ ಕಡಿಮೆ ದರದ ಕೂಲಿಯನ್ನು ನಿಗದಿ ಮಾಡುವ ಒಳಸಂಚು ಮಾಲಿಕರದ್ದಿದ್ದಂತೆ ಕಂಡು ಬಂದುದರಿಂದ ಅದನ್ನು ವಿರೋಧಿಸಿ ಮುಷ್ಕರ ಹೂಡ ಬೇಕಾಯಿತು.

ಮುಷ್ಕರ ನಡೆದಾಗ ಮಾಲಿಕರ ಏಜಂಟರಿಂದ ಗುಂಡಾಗಿರಿ ಬೆದರಿಕೆಗಳೆಲ್ಲ ನಡೆದರೂ ಕಾರ್ಮಿಕರೆಲ್ಲ ಐಕ್ಯತೆಯಿಂದ, ಧೈರ್ಯದಿಂದ ಮುಷ್ಕರವನ್ನು ಮುಂದುವರೆಸಿದರು ತಾ|| 20 ರಂದು ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದಾಗ ಕಾರ್ಮಿಕ ಮುಖಂಡರಾದ ಸುಕುಮಾರ ಅವರ ಮೇಲೆ ಹಲ್ಲೆ ನಡೆಸಲಾಯಿತು ಇಂಥ ಹಲ್ಲೆ ದಬ್ಬಾಳಿಕೆಗಳನ್ನೆದುರಿಸಿ ಮುಷ್ಕರ ಮುಂದುವರಿಯಿತು

ಸಿ. ಐ ಟಿ ಯು ಅಧ್ಯಕ್ಷರಾದ ಕಾ. ಸೂರ್ಯನಾರಾಯಣ ರಾವ್ ಅವರು ಈ ಮುಷ್ಕರದ ಕುರಿತು ವಿಧಾನ ಸಭೆಯಲ್ಲಿ ಪ್ರಶ್ನೆ ಎತ್ತಿದಾಗ 24—1—84 ರಂದು ಜಂಟೀ ಸಭೆ ಕರೆಯಲಾಗುವುದೆಂದು ಕಾರ್ಮಿಕ ಮಂತ್ರಿ ಅಶ್ವಾಸನೆ ಕೊಟ್ಟ ಪ್ರಕಾರ ಜಂಟೀ ಸಭೆ ನಡೆದು, 12—2—84 ರೊಳಗಾಗಿ ತ್ರಿಪಕ್ಷೀಯ ಸಭೆ ನಡೆಸಲು ಒಪ್ಪಿಕೊಳ್ಳಲಾಯಿತು.

ಈ ಮುಷ್ಕರವು ಕಾರ್ಮಿಕ ಸಂಘಗಳಿದ್ದ ತೋಟಗಳಲ್ಲಿ ಮಾತ್ರವಲ್ಲದೆ, ಸಂಘಟನೆಯೇ ಇಲ್ಲದ ಕಾಫಿ ತೋಟಗಳಲ್ಲಿಯೂ ನಡೆಯಿತು ಘರ್ಷಣೆಗಳೂ ನಡೆದವು. ಮುಷ್ಕರ ಮುರಿಯುವ ಪ್ರಯತ್ನಗಳೂ ನಡೆದವು. ಆದರೆ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ಮಾಲಿಕರ ಗುಂಡಾಗಿರಿಯನ್ನೆದುರಿಸಿ ಮುಷ್ಕರವನ್ನು ಯಶಸ್ವಿಗೊಳಿಸಿ ತೋಟ ಕಾರ್ಮಿಕರಲ್ಲಿ ಹೊಸ ಸ್ಫೂರ್ತಿ ತುಂಬಿದ್ದಾರೆ. ಇದೇ ಸ್ಫೂರ್ತಿಯನ್ನು ಮುಂದುವರಿಸಿ, ತೋಟ ಕಾರ್ಮಿಕರಲ್ಲಿ ಬಲಿಷ್ಠವಾದ ಸಿ. ಐ. ಟಿ ಯು ಸಂಘಟನೆ ಬೆಳೆದು ಬರುವಂತೆ ನೋಡಿಕೊಳ್ಳುವುದು ಅತ್ಯಗತ್ಯ.

ಪ್ಲಾಂಟೇಶನ್ ಕೈಗಾರಿಕೆಯಲ್ಲಿ ಈ ವರೆಗೆ ನಡೆದಿರುವ ಐಕ್ಯ ಮುಷ್ಕರಗಳಲ್ಲಿ ಇದು ದೀರ್ಘವಾದುದಾಗಿದೆ.

ಈ ಮುಷ್ಕರದಲ್ಲಿ ಸಿ ಐ ಟಿ ಯು ಪ್ರಮುಖ ಪಾತ್ರ ವಹಿಸಿತ್ತು. ಸಿ. ನಂಜುಂಡಪ್ಪ, ವಿ ಸುಕುಮಾರ, ವಿಶ್ವನಾಥ, ಕೇಶವ, ಕೆ. ಸುಕುಮಾರ ಇವರು ಸಿ. ಐ. ಟಿ ಯು ಸಂಘಗಳನ್ನು ಪ್ರತಿನಿಧಿಸಿದ್ದರು.

ಕಾರ್ಮಿಕ ವಿರೋಧೀ ನೀತಿ ವಿರುದ್ಧ ಹೋರಾಡಲು

—ದಿಲ್ಲಿ ಸಮಾವೇಶದ ಕರೆ

ಭಾರತ ದೇಶಾದ್ಯಂತ ಕಾರ್ಖಾನೆ ಮಾಲಿಕರು ಅನ್ಯಾಯವಾಗಿ ಅನುಸರಿಸುತ್ತಿರುವ ಲೇಆಫ್, ಲಾಕೌಟ್, ಕಾರ್ಖಾನೆ ಮುಚ್ಚುವಿಕೆ, ನೌಕರಿಯಿಂದ ತೆಗೆದು ಹಾಕುವಿಕೆ ಕ್ರಮಗಳಿಂದಾಗಿ ಲಕ್ಷಾವಧಿ ಕಾರ್ಮಿಕರು ಉದ್ಯೋಗವಿಲ್ಲದೆ ಸಂಕಷ್ಟಕ್ಕೊಳಗಾಗಿದ್ದಾರೆ. ಕಾರ್ಮಿಕರ ಐಕ್ಯತೆಯನ್ನು ಸಂಘ ಶಕ್ತಿಯನ್ನು ಮುರಿಯಲು ಕೆಲವು ಮಾಲಕರು ಕಾರ್ಖಾನೆ ಬಂಧ್ ಲಾಕೌಟ್ ಸಾರಿದರೆ ಇನ್ನೂ ಕೆಲವರು ಆರ್ಥಿಕ ಬಿಕ್ಕಟ್ಟಿನ ನೆಪ ಮುಂದೆ ಮಾಡುತ್ತಿದ್ದಾರೆ.

ಕೇಂದ್ರ ಸರಕಾರ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯಾವ ನಿರ್ದಿಷ್ಟ ಕ್ರಮವನ್ನೂ ಕೈಗೊಳ್ಳಲು ತಯಾರಿಲ್ಲ ರಾಜ್ಯ ಸರಕಾರಗಳು ತಮ್ಮ ಅಸಹಾಯಕತೆಯನ್ನು ತೋರ್ಪಡಿಸುತ್ತಿವೆ ಹೀಗಾಗಿ ಈ ಸಮಸ್ಯೆ ಗಂಭೀರವಾಗುತ್ತಿರುವುದನ್ನು ಕಂಡು, ಇಂಥ ಕಾರ್ಮಿಕ ವಿರೋಧಿ ನೀತಿಯನ್ನ ತಡೆಹಿಡಿಯುವಂಥೆ ಮಾಡಲು ಎಲ್ಲ ಕೇಂದ್ರ ಕಾರ್ಮಿಕ ಸಂಘಗಳ ರಾಷ್ಟ್ರೀಯ ಚಳುವಳಿ ಸಮಿತಿ ಜನವರಿ 20 ರಂದು ಸಮಾವೇಶವನ್ನೇರ್ಪಡಿಸಿತ್ತು.

ದೇಶದ ಬೇರೆ ಬೇರೆ ಕಡೆಗಳಿಂದ ಒಂದು ಸಾವಿರಕ್ಕು ಮೇಲ್ಪಟ್ಟ ಪ್ರತಿನಿಧಿಗಳು ಬಂದಿದರು (ಕರ್ನಾಟಕದಿಂದ ಕಾ ವಿ ಜೆ ಕೆ ನಾಯರ್ ರವರ ನಾಯಕತ್ವದಲ್ಲಿ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು)

84 ಮಾರ್ಚ್ 19ರಿಂದ 20 ವರೆಗೆ ಪ್ರಚಾರ ಸಪ್ತಾಹ ನಡೆಸಬೇಕೆಂದೂ, ಏಪ್ರಿಲ್ ತಿಂಗಳಲ್ಲಿ ಲೋಕಸಭೆಯ ಮುಂದೆ ಮತಪ್ರದರ್ಶನ ಮಾಡಬೇಕೆಂದೂ ನಿರ್ಣಯಿಸಲಾಯಿತು ಮತ ಪ್ರದರ್ಶನ ನಡೆದಾಗ ಬಂಧನಕ್ಕೊಳಗಾಗಿ ಜೈಲು ಸೇರುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಈ ಸಮಸ್ಯೆಗಳ ಕುರಿತು ಮಾರ್ಚ್ 15 ರೊಳಗೆ ರಾಜ್ಯ ಮತ್ತು ಪ್ರಾದೇಶಿಕ ಮಟ್ಟದ ಸಮ್ಮೇಳನಗಳನ್ನು ಏರ್ಪಡಿಸಿ ದಿಲ್ಲಿ ಸಮಾವೇಶದ ನಿರ್ಣಯಗಳಿಗೆ ಹೆಚ್ಚು ಪ್ರಚಾರ ಕೊಡಬೇಕೆಂದೂ ನಿರ್ಣಯಿಸಲಾಯಿತು.

ಕಾರ್ಖಾನೆಗಳನ್ನು ಲಾಕೌಟ್ ಮಾಡುವುದು, ಮುಚ್ಚುವುದು ಮೊದಲಾದ ಕ್ರಮಗಳನ್ನು ಬಂಡವಾಳದಾರರು ಯಾಕೆ ಅನುಸರಿಸುತ್ತಾರೆಂದರೆ ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಸಲುವಾಗಿದೆಂದೂ, ಇತ್ತೀಚಿನ ರಿಸರ್ವ ಬ್ಯಾಂಕ್ ವರದಿ ಪ್ರಕಾರ ಕಾರ್ಖಾನೆಗಳಿಗೆ ಆಗುವ ಹಾನಿಗೆ ಕಾರಣ ಅವುಗಳ ಅಸಮರ್ಪಕ ಆಡಳಿತೆ ಆದ್ದರಿಂದ ಆಡಳಿತೆಯಲ್ಲಿ ಕಾರ್ಮಿಕರು ಹೆಚ್ಚಾಗಿ ಪಾಲ್ಗೊಳ್ಳುವಂತೆ ಕಾರ್ಖಾನೆಯ ಆಡಳಿತ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯುವಂತೆ ಮಾಡುವುದು ಅಗತ್ಯವೆಂದೂ ದುಡಿಯುವ ಹಕ್ಕು ಮೂಲಭೂತ ಹಕ್ಕಾಗ ಬೇಕೆಂದೂ ಮುಖ್ಯ ನಿರ್ಣಯವನ್ನ ಮಂಡಿಸಿ ಭಾಷಣ ಮಾಡಿದ ಸಿ ಐ ಟಿ ಯು ಪ್ರಧಾನ ಕಾರ್ಯದರ್ಶಿ ಕಾ ಸಮರ ಮುಖರ್ಜಿಯವರು ಹೇಳಿದರು ಚತುರಾನನ್ ಮಿಶ್ರಾ (ಎ ಐ ಟಿ ಯು ಸಿ) ರಾಮನರೇಶ ಸಿಂಗ್ (ಬಿ ಎಂ. ಎಸ್) ಅಂಬಿಕಾ ಸೋನಿ (ಆರ್. ಎಂ ಎಸ್) ಸುರೇಂದ್ರ ಮೋಹನ (ಎಚ. ಎಂ. ಎಸ್) ಪ್ರಾಕುಲ್ ಚೌಧರಿ (ಯು ಟಿ. ಯು ಸಿ) ಅಮರ ಪ್ರಸಾದ ಚಕ್ರವರ್ತಿ (ಟಿ ಯು ಸಿ ಸಿ.) ಪ್ರಿಲಿಷ್ ಚಂದ್ರ (ಯು ಟಿ ಯು ಸಿ—ಲೆನಿನ್ ಸರಣಿ) ಇವರೆಲ್ಲ ಚರ್ಚೆಯಲ್ಲಿ ಭಾಗವಹಿಸಿ ಮಾತಾಡಿದರು.

ಬೆಂಗಳೂರು

ವಿಧಾನಸೌಧ ಚಲೋ ಯಶಸ್ವಿ ಕಾರ್ಯಕ್ರಮ.

ಬೆಂಗಳೂರು ಮಹಾನಗರದ ಸುತ್ತ ಮುತ್ತಲಿರುವ ಅನೇಕ ಕಾರ್ಖಾನೆಗಳಲ್ಲಿ ಮಾಲೀಕರು ಸಿ ಐ ಟಿ ಯು ಸಂಘಗಳನ್ನು ಮುರಿಯುವ ದುರುದ್ದೇಶದಿಂದ, ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಅಷ್ಟೇ ಅಲ್ಲ ಹಲವಾರು ತಿಂಗಳುಗಳಿಂದ ಮುಷ್ಕರ ನಡೆಯುತ್ತಿದ್ದರೂ ಕೂಡ ಸಿ ಐ ಟಿ ಯು ಯೂನಿಯನಿನ ಪದಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಲಿಕ್ಕೂ ತಯಾರಿಲ್ಲ.

ಕೇಂದ್ರ ಸರ್ಕಾರದ ಹಿರಿಯ ಬಂಡವಾಳಶಾಹಿ ಮತ್ತು ದೊಡ್ಡ ಭೂಮಾಲಿಕರ ಪರ ನೀತಿಯನ್ನು ಅನುಸರಿಸುತ್ತಿರುವ ಆರ್ಥಿಕ ಧೋರಣೆಯಿಂದಾಗಿ ದೇಶದ ಕೈಗಾರಿಕೆಗಳು, ಒಕ್ಕಲತನವೂ ಆರ್ಥಿಕ ಬಿಕ್ಕಟ್ಟನ್ನೆದುರಿಸಬೇಕಾಗಿದೆ. ಆದರ ಕೆಟ್ಟ ಪರಿಣಾಮ ಕಾರ್ಮಿಕರ, ರೈತರ ಮೇಲಾಗುತ್ತಿದೆ ಈ ಕಾರಣದಿಂದಾಗಿ ಹಲವಾರು ಕಾರ್ಖಾನೆಗಳ ಮಾಲಿಕರೆಲ್ಲ ಕೆಲಸಗಾರರನ್ನು ವಜಾ ಮಾಡುವ, ಲೇ ಆಫ್ ಮಾಡುವ ಕಾರ್ಖಾನೆಯನ್ನೇ ಲಾಕೌಟ್ ಮಾಡುವ, ಕೊನೆಗೆ ಬಂಧು ಮಾಡುವ ನೀತಿಯನ್ನನುಸರಿಸುತ್ತಿದ್ದಾರೆ. ಹೀಗಾಗಿ ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿ ಅವರ ಹೆಂಡಿರು ಮಕ್ಕಳೆಲ್ಲ ಉಪವಾಸ ಬೀಳುವಂತಾಗಿದೆ.

ಮಾಲಕರ ಇಂಥ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಪರಿಣಾಮ ಕಾರಿಯಾದ ಕ್ರಮ ಕೈಗೊಂಡು ಕಾರ್ಮಿಕರಿಗೆ ನ್ಯಾಯಕೊಡಿಸುವಲ್ಲಿ ರಾಜ್ಯದ ಜಾನತಾ ಸರಕಾರ ಕೂಡ ಯಶಸ್ವಿಯಾಗಿಲ್ಲೆಂದೇ ಹೇಳಬೇಕಾಗುತ್ತದೆ.

ಮಾಲಿಕರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಲು ಕಾರ್ಮಿಕರಿಗೆ ನ್ಯಾಯ ದೊರಕಿಸುವಂತೆ ರಾಜ್ಯ ಸರಕಾರ ಪರಿಣಾಮಕಾರಿಯಾಗಿ ಮಧ್ಯೆ ಪ್ರವೇಶಿಸಬೇಕೆಂದು ಒತ್ತಾಯಿಸಲು ಬೆಂಗಳೂರು ಸಿಐಟಿಯುನ ಸಮನ್ವಯ ಸಮಿತಿ ಜನವರಿ 30 ರಂದು ವಿಧಾನ ಸೌಧ ಚಲೋ ಕರೆಕೊಟ್ಟಿತು. 3000 ಕ್ಕೂ ಮೇಲ್ಪಟ್ಟು, ಮೈಸೂರು ರೋಡ್ ಕೃಷ್ಣರಾಜಪುರ ಮತ್ತಿನ್ನಿತರ ಪ್ರದೇಶದ ಕಾರ್ಮಿಕರು ಒಂದು ದಿವಸ ಕೆಲಸ ಬಿಟ್ಟು ಮೆರವಣಿಗೆಯಲ್ಲಿ ಕಬ್ಬನ್ ಪಾರ್ಕಿಗೆ ಬಂದು ವಿಧಾನ ಸೌಧದ ಮುಂದೆ ಮತ ಪ್ರದರ್ಶನ ನಡೆಸಿದರು. ಕಾ. ಶ್ರೀನಿವಾಸ್ ಟಿ. ಎಸ್. ಅನಂತರಾಮು ರೈತ ಸಂಘದ ಮುಖಂಡ ಜಗನ್ನಾಥ್ ಮೊದಲಾದವರು ಮತ ಪ್ರದರ್ಶನದ ನಂತರ ನಡೆದ ಸಭೆಯಲ್ಲಿ ಭಾಷಣ ಮಾಡಿದರು.

ಅಣು ಅಸ್ತ್ರ ವಿರೋಧಿ ಸಮ್ಮೇಳನ

ಅಮೇರಿಕದ ಅಧ್ಯಕ್ಷ ರೇಗನ್ ಅವರ ನೀತಿಯಿಂದಾಗಿ, ಅಣು ಯುದ್ಧದ ಭೀತಿ ಜಗತ್ತನ್ನಾವರಿಸುತ್ತಿದ್ದು, ಅದರಿಂದ ನಮ್ಮ ದೇಶಕ್ಕೂ ಅಪಾಯ ಉಂಟಾಗುತ್ತಿದೆ ಇದರ ಗಾಂಭೀರ್ಯವನ್ನರಿತ ನಮ್ಮ ದೇಶದ 8 ರಾಜಕೀಯ ಪಕ್ಷಗಳು ಸೇರಿ ಮಾರ್ಚ್ 8-9 ರಂದು ದಿಲ್ಲಿಯಲ್ಲಿ ಅಣು ಯುದ್ಧ ವಿರೋಧವಾಗಿ ರಾಷ್ಟ್ರೀಯ ಸಮಾವೇಶ ಸೇರಿಸಲು ನಿರ್ಧರಿಸಿದಾರೆ ಈ ಸಮಾವೇಶಕ್ಕೆ ಕಾರ್ಮಿಕರ, ರೈತರ, ಕೃಷಿ ಕೂಲಿಗಾರರ, ಯುವಕರ, ವಿದ್ಯಾರ್ಥಿಗಳ, ಮಹಿಳೆಯರ, ಲೇಖಕರ, ಕಲಾಕಾರರ ಸಂಘಟನೆಗಳ ಪ್ರತಿನಿಧಿಗಳನ್ನೂ ಆಮಂತ್ರಿಸಲಾಗಿದೆ ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯನ್ನೂ, ಈ ಸಮ್ಮೇಳನದ ಮೂಲ ತತ್ವವನ್ನು ಒಪ್ಪಿ ಕೊಳ್ಳುವ ಇತರ ವ್ಯಕ್ತಿಗಳನ್ನೂ ಆಮಂತ್ರಿಸಲಾಗುವುದು ಇದರ ಪೂರ್ವ ಭಾವಿಯಾಗಿ ದಿಲ್ಲಿ ಮತ್ತು ಇತರ ರಾಜ್ಯ ಕೇಂದ್ರಗಳಲ್ಲಿ ಜಂಟೀ ಮತ ಪ್ರದರ್ಶನಗಳನ್ನು ನಡೆಸಬೇಕೆಂದೂ ಕರೆ ಕೊಡಲಾಗಿದೆ.

ಸಿ. ಪಿ. ಐ (ಎಂ), ಸಿ. ಪಿ. ಐ, ಆರ್ ಎಸ್. ಪಿ. ಪುರೋಗಾಮಿ ಪಕ್ಷ ಡಿ ಎಸ್ ಪಿ ಜನವಾದಿ ಪಾರ್ಟಿ, ಕಾಂಗ್ರೆಸ್ (ಜೆ) ಮತ್ತು ಕಾಂಗ್ರೆಸ್ (ಎಸ್) ಈ 8 ಪಾರ್ಟಿಗಳು ಒಟ್ಟಾಗಿ ಈ ಕರೆ ಕೊಟ್ಟಿವೆ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಎಲ್ಲರೂ ಶಕ್ತಿ ಮೀರಿ ಸಹಕರಿಸಬೇಕೆಂದು ವಿನಂತಿ

ದರ್ಖಾಸ್ತುದಾರರ ಮತ್ತು ನಿವೇಶನ ರಹಿತರ ರೈತ ಸಮ್ಮೇಳನಗಳು

ದಕ್ಷಿಣ ಕನ್ನಡ ಜಿಲ್ಲೆ.

ಸರಕಾರಿ ಜಾಗದಲ್ಲಿ ವಾಸಿಸುವ ಮತ್ತು ಕೃಷಿ ಮಾಡಿ ಬದುಕುವ ಹಾಗೂ ಮನೆ ನಿವೇಶನ ದೊರೆತಿದ್ದರೂ ಹಕ್ಕು ಪತ್ರ ದೊರೆಯದಿರುವ ಬಡ ಜನರ ಜಿಲ್ಲಾ ಮಟ್ಟದ ಸಮ್ಮೇಳನವು 1984 ಜನವರಿ 11 ರಂದು ಮಂಗಳೂರಿನಲ್ಲಿ ನಡೆಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ಬಂದಿದ್ದ ಸುಮಾರು ಒಂದೂವರೆ ಸಹಸ್ರ ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನವು ಮಂಗಳೂರಿನಲ್ಲಿ ದ. ಕ. ಜಿಲ್ಲಾ ಹಂಚಿನ ಮಜೂರರ ಯೂನಿಯನ್ ಸಭಾ ಭವನದಲ್ಲಿ ನಡೆಯಿತು.

ಬಡ ಜನರ ಸ್ವಾಧೀನವಿರುವ ಭೂಮಿಯನ್ನು ಉಚಿತವಾಗಿ ಖಾಯಂಗೊಳಿಸಲು ಒತ್ತಾಯಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಫೆಬ್ರುವರಿ 11 ರೊಳಗೆ ಸರಕಾರದ ಕಡೆಯಿಂದ ಬೇಡಿಕೆಗಳನ್ನು ಈಡೇರಿಸುವುದರ ಬಗ್ಗೆ ವಿನೊಂದೂ ಉತ್ತರ ದೊರೆತಿಲ್ಲವಾದರೆ ಜಿಲ್ಲೆಯ ಮೂಲೆ ಮೂಲೆಯಿಂದ ಸರಕಾರಿ ಜಾಗದಲ್ಲಿ ವಾಸಿಸುವ ಸಹಸ್ರಾರು ಬಡ ಜನರು ಕಾಲ್ನಡೆ ಜಾಥಾದಲ್ಲಿ ಬಂದು, ಕಾರ್ಮಿಕ ವರ್ಗದ ಬೆಂಬಲದೊಂದಿಗೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯವರ ಕಛೇರಿ ಎದುರು ನಲವತ್ತೆಂಟು ತಾಸುಗಳ ಬೃಹತ್ ಸಾಮೂಹಿಕ ಸತ್ಯಾಗ್ರಹ ನಡೆಸಲೂ ತೀರ್ಮಾನಿಸಲಾಯಿತು.

ಕಾ. ಕೆ. ಆರ್. ಶ್ರಿಯಾನ್, ಕಾ. ಕೆ. ವಿ. ರಾವ್, ಕಾ. ರಾಮ ಕೆ. ಕುಂದರ, ಕಾ. ಕೆ. ಮೋನಪ್ಪ ಗೌಡ, ಕಾ. ತಂಬನ್, ಕಾ. ಡೇವಿಡ್ ಕರ್ಡ ಇವರುಗಳುಳ್ಳ ಆರು ಮಂದಿಯ ಅಧ್ಯಕ್ಷ ಮಂಡಳಿಯು ಸಮ್ಮೇಳನವನ್ನು ನಡೆಸಿ ಕೊಟ್ಟಿತು. ಸಮಸ್ಯೆಯ ಬಗ್ಗೆ ಕಾ. ಎಂ. ಕೆ. ಭಟ್ ಪ್ರಸ್ತಾಪಿಸಿದರು. ಮುಂದಿನ ಹೋರಾಟದ ಬಗ್ಗೆ ಕಾ. ಜನಾರ್ಧನ ನಾಯಕ್ ವಿಷಯ ಮಂಡಿಸಿದರು. ಪ್ರಾಂತ ರೈತ ಸಂಘದ ಅಧ್ಯಕ್ಷ ಹಾಗೂ ಶಾಸಕ ಕಾ. ರಾಮಚಂದ್ರರಾಯರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಕಾ. ಸೂರ್ಯನಾರಾಯಣ ಭಟ್, ಕಾ. ಬಿ. ರಾಮಕೃಷ್ಣ, ಕಾ. ಪುತ್ತಣ್ಣ ರಾಮಯ್ಯ ಗೌಡ, ಕಾ. ಪಾಲ್ ಡಿಸೋಜ, ಕಾ. ಬಿ. ನಾರಾಯಣ ಹಾಗೂ ಇನ್ನೂ ಹಲವಾರು ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಸಂಜೆ 4 ಕ್ಕೆ ಜಿಲ್ಲಾಧಿಕಾರಿ ಕಛೇರಿಗೆ ಬೃಹತ್ ಮೆರವಣಿಗೆಯಲ್ಲಿ ತೆರಳಿ ಮುಖ್ಯಮಂತ್ರಿಯವರಿಗಿರುವ ಮನವಿಯನ್ನು ವಿಶೇಷ ಜಿಲ್ಲಾಧಿಕಾರಿಯವರಿಗೆ ಕೊಡಲಾಯಿತು. ಬೇಡಿಕೆಯನ್ನು ಸರಕಾರವು ಈಡೇರಿಸದಿದ್ದರೆ ಉಗ್ರ ಚಳವಳಿ ನಡೆಸಬೇಕಾದೀತೆಂದು ಸರಕಾರವನ್ನು ಎಚ್ಚರಿಸುವುದರೊಂದಿಗೆ ಸಮ್ಮೇಳನ ಮುಕ್ತಾಯವಾಯಿತು. ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಜಿಲ್ಲಾ ಮಟ್ಟದ ಸಮ್ಮೇಳನ

ದರಖಾಸ್ತುದಾರರ ಹಾಗೂ ನಿವೇಶನ ರಹಿತ ರೈತರ ಮತ್ತು ಮನೆ ನಿವೇಶನ ಇಲ್ಲದ ಬಡಜನರ ಜಿಲ್ಲಾ ಮಟ್ಟದ ಸಮಾವೇಶವು 1984 ಜನವರಿ 21 ರಂದು ಬೆಂಗಳೂರಿನಲ್ಲಿ ಪುರಭವನದಲ್ಲಿ ನಡೆಯಿತು. ಸುಮಾರು ಎರಡೂವರೆ ಸಹಸ್ರಕ್ಕಿಂತಲೂ ಜಾಸ್ತಿ ಬಡ ಜನರು ಬಂದು ಭಾಗವಹಿಸಿದ್ದ ಈ ಸಮ್ಮೇಳನವನ್ನು ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಶ್ರೀ ನಜೀರ್ ಸಾಬ್ ಅವರು ಉದ್ಘಾಟಿಸಿದರು. ಬಡ ಜನರ ಬೇಡಿಕೆಗಳ ಬಗ್ಗೆ ತಮ್ಮ ಸರಕಾರ ಸ್ಪಂದಿಸುವುದು ಎಂದ ಅವರು ಶೋಷಣೆಯಿಂದ ಕೂಡಿದ ಇಂದಿನ ವ್ಯವಸ್ಥೆಯ ವಿರುದ್ಧ ಹೋರಾಡಬೇಕಿದೆ ಎಂದರು. ಸೌಹಾರ್ದ ಭಾಷಣವನ್ನು ಮಾಡಿದ ಸಿ ಐ ಟಿ ಯು ರಾಜ್ಯ ಸಮಿತಿ ಅಧ್ಯಕ್ಷ ಹಾಗೂ ಶಾಸಕರಾದ ಕಾ ಎಸ್. ಸೂರ್ಯನಾರಾಯಣರಾವ್ ಅವರು ಹಳ್ಳಿಯ ಬಡವರ ಈ ಹೋರಾಟಕ್ಕೆ ಕಾರ್ಮಿಕ ವರ್ಗದ ಹೋರಾಟ ಬೆಂಬಲವನ್ನು ಘೋಷಿಸಿದರು. ಮುಖ್ಯ ಅತಿಥಿಗಳಲ್ಲೊಬ್ಬರಾಗಿ ಮಾತನಾಡಿದ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ವಿ ಎನ್ ಹಳಕಟ್ಟಿ ಅವರು ಭೂಮಿಯ ಹಕ್ಕಿಗಾಗಿ ಹೋರಾಡುವಾಗಲೇ ಕೃಷಿ ಉತ್ಪನ್ನಗಳಿಗೆ ಲಾಭದಾಯ ಬೆಲೆ ಮತ್ತು ಕೃಷಿ ಕೂಲಿಗಾರರಿಗೆ ಸರಿಯಾದ ವೇತನಕ್ಕಾಗಿ ಹೋರಾಡುವ ಅವಶ್ಯಕತೆಯನ್ನು ವಿವರಿಸಿದರು. ಕಾ. ಸೂರ್ಯನಾರಾಯಣ ರಾವ್ ಮತ್ತು ಹಳಕಟ್ಟಿಯವರು ರೈತರನ್ನು ತಪ್ಪು ದಾರಿಗೆಳೆಯುವ ರುದ್ರಪ್ಪನವರ ರೈತ ಸಂಘದ ನೀತಿಯನ್ನು ಖಂಡಿಸಿದರು.

ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಕಾ ಎಂ ಕೆ ಭಟ್ ಅವರು ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಿ ದ. ಕ. ಜಿಲ್ಲೆಯ ಅನುಭವವನ್ನು ಹೇಳಿ ರಾಜ್ಯದಾದ್ಯಂತ ಬೆಳೆದು ಬರುತ್ತಿರುವ ಮತ್ತು ಬೆಳೆಸಬೇಕಿರುವ ಹೋರಾಟದ ಬಗ್ಗೆ ಮಾತನಾಡಿದರು.

ಪ್ರಾಂತ ರೈತ ಸಂಘದ ಕಾರ್ಯದರ್ಶಿ ಜಗನ್ನಾಥ ಅವರು ಮಾತನಾಡಿ ಬೆಂಗಳೂರು ಜಿಲ್ಲೆಯಲ್ಲಿ ಈ ಬಡ ಜನರು ಎದುರಿಸುತ್ತಿರುವ ಕಷ್ಟದ ಬಗ್ಗೆ ವಿವರಣೆ ಇತ್ತು ಸರಕಾರದ ಭರವಸೆಗೆ ಮರುಳಾಗದೆ ಹೋರಾಟವನ್ನು ಬೆಳೆಸಲು ಕರೆ ಇತ್ತರು. ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂತ ರೈತ ಸಂಘದ ಅಧ್ಯಕ್ಷ ಹಾಗೂ ಶಾಸಕ ಕಾ. ರಾಮಚಂದ್ರರಾಯರು ಬೇಡಿಕೆಗಳ ಈಡೇರಿಕೆಗಾಗಿ ಸಂಘಟಿತ ಹೋರಾಟ ನಡೆಸಲು ಕರೆ ಇತ್ತು ಈ ಹೋರಾಟದಲ್ಲಿ ತಾವೂ ಪಾಲ್ಗೊಳ್ಳುವುದಾಗಿ ಘೋಷಿಸಿದರು. ಬೆಂಗಳೂರು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಾ. ಲಕ್ಷ್ಮಣ್ಣ ಸ್ವಾಗತಿಸಿದ್ದರು. ಕಾ. ಮನೋಹರ, ಕಾ. ರಾಮಭದ್ರಯ್ಯ ಹಾಗೂ ಇನ್ನೂ ಹಲವಾರು ಮಂದಿ ಸಮಸ್ಯೆ ಮತ್ತು ಹೋರಾಟದ ಬಗ್ಗೆ ಮಾತನಾಡಿದ್ದರು. ಬಹಳಷ್ಟು ಮಂದಿ ಮಹಿಳೆಯರು ಭಾಗವಹಿಸಿದ್ದ ಈ ಸಮ್ಮೇಳನಕ್ಕೆ ಅತ್ಯಂತ ಹೆಚ್ಚಿಗೆ ಜನ ಹೊಸಕೋಟೆ ತಾಲೂಕಿನಿಂದ ಬಂದಿದ್ದರು.

ಸಮ್ಮೇಳನದ ಕೊನೆಗೆ, ಸಂಜೆ 4 ಕ್ಕೆ ಬೃಹತ್ ಮೆರವಣಿಗೆಯಲ್ಲಿ ಕಬ್ಬನ್ ಪಾರ್ಕಿಗೆ ತೆರಳಿ, ಅಲ್ಲಿಂದ ನಿಯೋಗವೊಂದು ರೆವಿನ್ಯೂ ಕಮಿಷನರವರನ್ನೂ ಭೆಟ್ಟಿಯಾಗಿ, ರೆವಿನ್ಯೂ ಮಂತ್ರಿಯವರಿಗೆ ಕೊಡುವಂತೆ ಹೇಳಿ ಒಂದು ಮನವಿಯನ್ನು ಕೊಡಲಾಯಿತು.

ಬಿಜಾಪುರ ಜಿಲ್ಲೆಯಲ್ಲಿ ಭೂಮಿಗಾಗಿ ಹೋರಾಟ

ಬಿಜಾಪುರ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ಬಡ ಹರಿಜನ-ಗಿರಿ ಜನರೆಲ್ಲ ಸಾವಿರಾರು ಎಕರೆ ಭೂಮಿಯಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಸಾಗುವಳಿ ಮಾಡಿ ಆಹಾರ ಧಾನ್ಯ ಬೆಳೆಯುತ್ತಿದ್ದು ಅವರನ್ನು ಕೊರ ಹಾಕಿ ಕಾಡು ಬೆಳೆಸುವ ವಿಚಾರ ನಡೆಸುವುದರ ವಿರುದ್ಧ ಬಿಜಾಪುರ ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಜನವರಿ 5 ರಂದು ಇಂಡಿಯಲ್ಲೂ, ತಾ 9ರಂದು ಬಿಜಾಪುರದಲ್ಲೂ ರೈತರ ಮೆರವಣಿಗೆ, ಮತಪ್ರದರ್ಶನಗಳನ್ನು ನಡೆಸಿ, ರೈತರು ವಶಪಡಿಸಿಕೊಂಡಿರುವ ಭೂಮಿಯ ಹಕ್ಕು ಪತ್ರವನ್ನು ರೈತರಿಗೆ ಕೂಡಲೇ ಒದಗಿಸಬೇಕೆಂದೂ, ಮನೆಯಿಲ್ಲದವರಿಗೆ ಮನೆ ಕಟ್ಟಿಸಿಕೊಡಬೇಕೆಂದೂ, ಮೊದಲಾದ ಬೇಡಿಕೆಗಳನ್ನೊಳಗೊಂಡ ಮನವಿಗಳನ್ನು ಅಧಿಕಾರಿಗಳಿಗೆ ಸಲ್ಲಿಸಲಾಯಿತು. ನಂತರ ನಡೆದ ಸಾರ್ವಜನಿಕ ಸಭೆಗಳಲ್ಲಿ ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಎನ್. ಕೆ ಉಪಾಧ್ಯಾಯ, ಮಣ್ಣೂರ, ಇಕ್ತಿಯಾರ್ ಮೊದಲಾದವರು ಭಾಷಣ ಮಾಡಿದರು.

"ಐಕ್ಯರಂಗ" ಓದಿ
ನಿಮ್ಮ ಸ್ನೇಹಿತರನ್ನೂ ಓದಿಸಿ

ಕರ್ನಾಟಕ ರಾಜ್ಯ ಹತ್ತಿ ಬೆಳೆಗಾರರ ಸಮಾವೇಶ

ಕರ್ನಾಟಕ ರಾಜ್ಯದ ಹತ್ತಿ ಬೆಳೆಗಾರರ ಸಮಾವೇಶ ಫೆಬ್ರುವರಿ 15-16 ರಂದು ರಾಯಚೂರು ನಗರದ ಎ. ಪಿ. ಎಂ. ಸಿ. ಸಭಾಂಗಣದಲ್ಲಿ ಸೇರುತ್ತದೆ. ಹತ್ತಿ ಬೆಳೆಗಾರರ ಸಮಸ್ಯೆಗಳನ್ನು ಚರ್ಚಿಸಿ, ಅವುಗಳ ಪರಿಹಾರಕ್ಕೆ ಹೋರಾಟದ ಕಾರ್ಯಕ್ರಮ ನಿರ್ಧರಿಸಲಾಗುವುದು. ಈ ಸಮಾವೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಹತ್ತಿ ಬೆಳೆಗಾರರು ಪಾಲ್ಗೊಳ್ಳಬೇಕೆಂದು ಸ್ವಾಗತ ಸಮಿತಿ ಕಾರ್ಯದರ್ಶಿ ಚಂದ್ರಶೇಖರ ಬಾಳೆಯವರು ಕೇಳಿ ಕೊಂಡಿದ್ದಾರೆ.

ಸಿ. ಐ. ಟಿ. ಯು. ಕೌನ್ಸಿಲ್ ಸಭೆ

ಕರ್ನಾಟಕ ರಾಜ್ಯದ ಸಿಐಟಿಯು ಕಾರ್ಯಕಾರಿ ಸಮಿತಿ ಮತ್ತು ಕೌನ್ಸಿಲ್ ಸಭೆ ಫೆಬ್ರುವರಿ 18,19, 20ರಂದು ದಾಂಡೇಲಿಯಲ್ಲಿ ಸೇರುತ್ತದೆಂದು ಕಾರ್ಯದರ್ಶಿ ಸಿ. ನಂಜುಂಡಪ್ಪನವರು ತಿಳಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ಕರೆ

[4 ನೇ ಪುಟದಿಂದ]

ಕೂಲಿ ಹಾಗೂ ಸವಲತ್ತುಗಳಿಗಾಗಿ ಹೋರಾಡುವುದು ಕರ್ನಾಟಕ ಪ್ರಾಂತ ರೈತ ಸಂಘದ ಧೋರಣೆಯಾಗಿದೆ. ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಹತ್ತಿ ಬೆಳೆಗಾರರ ಸಮಾವೇಶವನ್ನು ರಾಯಚೂರಿನಲ್ಲಿ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘವು ಸಿದ್ಧತೆ ನಡೆಸುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಗನೆ ಕೃಷಿ ಕೂಲಿಗಾರರ ಸಮಾವೇಶವನ್ನು ನಡೆಸಲಾಗುವುದು.

ಕಾಂಗ್ರೆಸ್ಸಿಗೆ ಸಹಾಯ :

ಕೃಷಿ ಉತ್ಪನ್ನಗಳ ಬೆಲೆಯ ಪ್ರಶ್ನೆ, ಸಾಲ ರಿಯಾಯಿತಿ ಹಾಗೂ ರದ್ದತಿಯ ಪ್ರಶ್ನೆ ಇವೇ ಮೊದಲಾದವುಗಳ ಪರಿಹಾರಕ್ಕಾಗಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತರಲು ಹೋರಾಡುವುದು ಅವಶ್ಯ. ಕಾಂಗ್ರೆಸ್ ಸರಕಾರಗಳು ಸ್ವಾತಂತ್ರ್ಯ ನಂತರ ಅನುಸರಿಸಿಕೊಂಡು ಬಂದಿರುವ ಬಂಡವಳಶಾಹಿಪರ ನೀತಿಯು ಕೃಷಿ ರಂಗವನ್ನು ನಾಶದ ಅಂಚಿಗೆ ತಂದಿದೆ.

ಕಾಂಗ್ರೆಸ್ ಸರಕಾರವು ಅನುಸರಿಸಿಕೊಂಡು ಬಂದಿರುವ ದೇಶೀಯ ಹಾಗೂ ವಿದೇಶಿ ಗುತ್ತೇದಾರಿ ಮತ್ತು ಏಕಸ್ವಾಮ್ಯ ಬಂಡವಳದಾರರ ಪರವಾದ ಧೋರಣೆಗಳಿಂದಲಾಗಿ ರೈತಾಪಿ ವರ್ಗ ದಿವಾಳಿಯಾಗುವುದರಲ್ಲಿದೆ. ಆದುದರಿಂದ ಎಲ್ಲರೂ ಒಗ್ಗಟ್ಟಾಗಿ ಕೇಂದ್ರ ಸರಕಾರವು ತನ್ನ ನೀತಿಗಳನ್ನು ಬದಲಿಸುವಂತೆ ಒತ್ತಾಯಿಸಿ ಹೋರಾಡಬೇಕು. ರಾಜ್ಯ ಸರಕಾರವೂ ತನ್ನ ಜವಾಬ್ದಾರಿಗಳಿಂದ ತಪ್ಪುವಂತಿಲ್ಲ. ತನ್ನ ಸೀಮಿತ ಅಧಿಕಾರದಲ್ಲಿ ಸಾಧ್ಯವಿರುವುದನ್ನೆಲ್ಲಾ ಮಾಡುವಂತೆ ರಾಜ್ಯ ಸರಕಾರವನ್ನೂ ಒತ್ತಾಯಿಸಬೇಕು. ರಾಜ್ಯ ಸರಕಾರವೂ ಕೇಂದ್ರ ಸರಕಾರದ ಮೇಲೆ ಒತ್ತಾಯ ತರಬೇಕು. ಕೃಷಿ ರಂಗವನ್ನು ನಾಶದ ಅಂಚಿಗೆ ತಂದಿರುವ ಕಾಂಗ್ರೆಸ್ಸನ್ನು ಸೋಲಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ಸೇತರ ಸರಕಾರವನ್ನು ಉರುಳಿಸಲು ಕಾಂಗ್ರೆಸ್ಸು ಎಲ್ಲಾ ರೀತಿಯ ಕುತಂತ್ರಗಳನ್ನು ನಡೆಸುತ್ತಿರುವಾಗ ಶ್ರೀ ಎಚ್. ಎಸ್. ರುದ್ರಪ್ಪನವರ ನೇತೃತ್ವದ ಕರ್ನಾಟಕ ರಾಜ್ಯ ರೈತ ಸಂಘವು ಅನುಸರಿಸುತ್ತಿರುವ ಧೋರಣೆ ಕಾಂಗ್ರೆಸ್ಸಿಗೆ ಸಹಾಯಕವಾಗಿದೆ.

ಈ ಮೊದಲು ರಾಜ್ಯದಲ್ಲಿ ಸಂಯುಕ್ತ ಚಳವಳಿ ನಡೆಯುವಾಗ ಲೆಲ್ಲಾ ರುದ್ರಪ್ಪನವರ ನೇತೃತ್ವದ ರೈತ ಸಂಘವು ಪ್ರತ್ಯೇಕ ಉಳಿದಿತ್ತು. ಕಳೆದ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ಸನ್ನು ನಿರ್ಣಾಯಕವಾಗಿ ಸೋಲಿಸಲು ಅವಕಾಶ ಒದಗಿ ಬಂದಾಗ ಇವರ ರೈತ ಸಂಘವು ತಟಸ್ಥವಾಗಲು ತೀರ್ಮಾನಿಸಿತು. ರಾಜಕೀಯವೇ ಬೇಡ ಎಂದಿದ್ದ ಈ ರೈತ ಸಂಘವು ರಾಜ್ಯ ಸರಕಾರದ ಬೆಂಬಲವನ್ನು ಪಡೆದು ಕೇಂದ್ರ ಸರಕಾರದ ವಿರುದ್ಧ ಹೋರಾಡುವ ಬದಲು ರಾಜ್ಯದ ಮುಖ್ಯ ಮಂತ್ರಿಯವರೇ ಅಧಿಕಾರ ಬಿಡಿ ಎನ್ನುತ್ತಿದೆ. ಇದರಲ್ಲಿ ಜಾತೀಯ ರಾಜಕೀಯದ ವಾಸನೆ ಮತ್ತು ಕಾಂಗ್ರೆಸ್ಸಿಗೆ ಅನುಕೂಲವಾಗುವ ಧೋರಣೆಗಳು ಅಡಗಿವೆ ಎಂದು ಊಹಿಸಿದರೆ ತಪ್ಪಲ್ಲ!

ಕೃಷಿ ರಂಗವು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರ ದೊರಕಿಸಲು ಒಗ್ಗಟ್ಟಾಗಿ ಹೋರಾಡಲು ಮುಂದಾಗುವುದು ಇಂದಿನ ತುರ್ತು ಅವಶ್ಯ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಇತರ ರೈತ ಸಂಘಗಳು ಒಗ್ಗಟ್ಟಾಗಿ ಈ ದಿಸೆಯಲ್ಲಿ ಐಕ್ಯ ಚಳವಳಿಗೆ ಮುಂದಾಗಲು ಕರ್ನಾಟಕ ರೈತ ಸಂಘವು ಕರೆ ನೀಡಿದೆ.

ಭೂಮಿಯ ಹಕ್ಕಿಗಾಗಿ ರಾಜ್ಯದಾದ್ಯಂತ ಹೋರಾಟ ನಡೆಯಲಿ

—ಕರ್ನಾಟಕ ಪ್ರಾಂತ ರೈತ ಸಂಘದ ಕರೆ

ಸಮಸ್ಯೆಯ ರೂಪ :

ಸರಕಾರಿ ಭೂಮಿಯಲ್ಲಿ ಅಲ್ಪ ಸ್ವಲ್ಪ ಕೃಷಿ ಮಾಡಿಕೊಂಡು ಅಥವಾ ಮನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸಿಸುತ್ತಾ ಬಂದಿದ್ದರೂ ಸ್ವಾಧೀನವಿರುವ ಭೂಮಿಯು ಇನ್ನೂ ಖಾಯಂ ಆಗದೇ ಇರುವ ಭೂಮಿಯ ಮೇಲೆ ಯಾವುದೇ ಹಕ್ಕು ಪತ್ರಗಳು ದೊರೆಯದೆ ಇರುವ ಬಡ ಕುಟುಂಬಗಳು ಕರ್ನಾಟಕ ರಾಜ್ಯದಲ್ಲಿ ಲಕ್ಷಗಟ್ಟಲೆಯಲ್ಲಿವೆ. ಕರಾವಳಿ ಮತ್ತು ಮಲ್ನಾಡು ಜಿಲ್ಲೆಗಳಲ್ಲಿ ಇವರ ಸಂಖ್ಯೆ ಉಳಿದೆಡೆಗಳಿಗಿಂತ ಜಾಸ್ತಿ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ಸಂಖ್ಯೆಯು ಉಳಿದೆಲ್ಲಾ ಜಿಲ್ಲೆಗಳಿಗಿಂತಲೂ ಹೆಚ್ಚಿಗಿದೆ. ಸರಕಾರಿ ಭೂಮಿಯಲ್ಲಿ ಒತ್ತುವರಿ ಮಾಡಿರುವವರು ಮತ್ತು ಸರಕಾರಿ ಭೂಮಿಯಲ್ಲಿ ವಾಸಿಸುವ ಬಡಜನರ ಬಗ್ಗೆ ಸರಕಾರವು ಕೊಡುವ ಮಾಹಿತಿಯು ಸತ್ಯಕ್ಕೆ ತುಂಬಾ ದೂರವಿದೆ. ಈ ಬಗ್ಗೆ ರೆವಿನ್ಯೂ ಇಲಾಖೆಯಲ್ಲಿರುವ ದಾಖಲಾತಿ ಸರಿ ಇಲ್ಲ. ಉದಾಹರಣೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಭೂಮಿಯಲ್ಲಿ ಅತಿಕ್ರಮ ಮಾಡಿರುವವರ ಸಂಖ್ಯೆಯು ಕಂದಾಯ ಸಚಿವರು ಇತ್ತೀಚಿಗೆ ವಿಧಾನ ಸಭೆಯಲ್ಲಿ ಕೊಟ್ಟಿರುವ ಮಾಹಿತಿ ಪ್ರಕಾರ ಕೇವಲ 13, 475. ಆದರೆ ವಾಸ್ತವವಾಗಿ ಸರಕಾರಿ ಭೂಮಿಯಲ್ಲಿ ಒತ್ತುವರಿ ಮಾಡಿರುವ ಮತ್ತು ಮನೆ ನಿವೇಶನ ದೊರೆತಿದ್ದರೂ ಏನೇನೂ ಹಕ್ಕು ಪತ್ರ ದೊರೆಯದಿರುವ ಬಡ ಕುಟುಂಬಗಳ ಸಂಖ್ಯೆ ಸುಮಾರು ಒಂದು ಲಕ್ಷಕ್ಕೆ ಸಮೀಪವಿದೆ. ಸಹಸ್ರಾರು ಬಡಜನರ ಸ್ವಾಧೀನವಿರುವ ಭೂಮಿಯು ಸರಕಾರದ ದಾಖಲೆಯಲ್ಲಿ ಜನ ವಾಸ್ತವ್ಯವಿರದ ಮತ್ತು ಕೃಷಿ ಯೋಗ್ಯವಲ್ಲದ ಬಂಜರು ಭೂಮಿ ಎಂದಿದೆ! ಸರಕಾರದ ಲೆಕ್ಕ ಪ್ರಕಾರ ಸರಕಾರಿ ಭೂಮಿಯಲ್ಲಿ ಒತ್ತುವರಿ ಮಾಡಿರುವವರ ಸಂಖ್ಯೆ ಇಡಿ ರಾಜ್ಯದಲ್ಲಿ 75000. ಆದರೆ ವಾಸ್ತವವಾಗಿ ರಾಜ್ಯದಲ್ಲಿ ಇವರ ಸಂಖ್ಯೆ ಲಕ್ಷ ಗಟ್ಟಲೆಯಲ್ಲಿದೆ. ಇದರೊಂದಿಗೆ ಮನೆ ನಿವೇಶನ ಇಲ್ಲದ ಬಡವರ ಸಂಖ್ಯೆಯೂ ಲಕ್ಷ ಗಟ್ಟಲೆಯಲ್ಲಿದೆ.

ಬಡಜನರ ಸ್ವಾಧೀನವಿರುವ ಭೂಮಿಯು ಫಾರೆಸ್ಟ್ ಹೊಸ ಫಾರೆಸ್ಟ್ ಅಥವಾ ಮೈನರ್ ಫಾರೆಸ್ಟ್ ಪ್ರದೇಶ, ಫಾರೆಸ್ಟ್ ಗಡಿ ಪ್ರದೇಶ, ಪುರಸಭೆ ಮತ್ತು ನಗರಸಭೆ ಒಳಗಿನ ಪ್ರದೇಶ, 'ಸಿ ಮತ್ತು ಡಿ' ಪ್ರದೇಶ, ಪರಂಬೋಕು ಗೋಮಾಳ, ಕುಮ್ಕಿ ಭೂಮಿ, ಖಾನ ಮತ್ತು ಬಾಣೆ ಎಂಬಿತ್ಯಾದಿ ವರ್ಗೀಕರಣದ ವ್ಯಾಪ್ತಿಯೊಳಗೆ ಇರುವುದರಿಂದ ಅನೇಕ ವರ್ಷಗಳಿಂದ ಸ್ವಾಧೀನವಿರುವ ಭೂಮಿಯನ್ನು ಸರಕಾರವು ಖಾಯಂ ಗೊಳಿಸಿಲ್ಲ. ಹೊಸ ಫಾರೆಸ್ಟ್ ಹೊಸ ಪುರಸಭೆ, ಪುರಸಭೆ ಮತ್ತು ನಗರ ಸಭೆಗಳ ವ್ಯಾಪ್ತಿಯ ವಿಸ್ತರಣೆ, "ಸಿ ಮತ್ತು ಡಿ" ವರ್ಗೀಕರಣ, ಸಾಮಾಜಿಕ ಅರಣ್ಯ, "ಗ್ರೀನ್ ಬೆಲ್ಟ್" ಇತ್ಯಾದಿಗಳನ್ನು ನೋಡುವುದಕ್ಕೆ ಎಷ್ಟೋ ಮೊದಲಿಂದಲೇ ಬಡ ಜನರ ಸ್ವಾಧೀನವಿರುವ ಭೂಮಿಯನ್ನು ಈಗ ಬೇರೆ ಬೇರೆ ಕಾರಣಗಳನ್ನು ಹೇಳಿ ಖಾಯಂಗೊಳಿಸದಿರುವುದು ಸರಿ ಅಲ್ಲ. ಹಲವಾರು ವರ್ಷಗಳಿಂದ ಸರಕಾರಿ ಭೂಮಿಯಲ್ಲಿದ್ದು ಅಥವಾ ಕೃಷಿ ಮಾಡುತ್ತಿದ್ದು, ಈ ಬಡ ಮಂದಿಯು ಭೂಮಿಯನ್ನು ಖಾಯಂ ಗೊಳಿಸುವಂತೆ ಅರ್ಜಿ ಹಾಕಿದಾಗಲೆಲ್ಲಾ ಬೇರೆ ಬೇರೆ ಕಾರಣಗಳನ್ನು ಕೊಟ್ಟು ಅವನ್ನು ತಿರಸ್ಕೃತ ಮಾಡುವುದು ಸಾಮಾನ್ಯವಾಗಿಬಿಟ್ಟಿದೆ. ಬಡಜನರ ಸ್ವಾಧೀನವಿರುವ ಭೂಮಿಯು ಖಾಯಂ ಆಗಿಲ್ಲವಾದರೂ ಎಷ್ಟೋ ಮಂದಿ ಶ್ರೀಮಂತ ಭೂಮಾಲಕರೂ, ಶ್ರೀಮಂತ ಪ್ಲಾಂಟರುಗಳು, ಪ್ರಭಾವಿತ ವ್ಯಕ್ತಿಗಳೂ ಲಂಚದ ಪ್ರಭಾವದಿಂದಲೂ, ಅಧಿಕಾರದ ದುರುಪಯೋಗದ ಮೂಲಕವೂ ಒಬ್ಬೊಬ್ಬರೂ ಸಹಸ್ರಾರು ಎಕರೆಗಳಂತೆ ಸರಕಾರಿ ಭೂಮಿಯ ಮೇಲೆ ಹಕ್ಕು ಪತ್ರ ಪಡೆದಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಬಡಜನರ ಸ್ವಾಧೀನವಿರುವ ಸರಕಾರಿ ಭೂಮಿಯು ಇತ್ತೀಚೆಗೆ, ಅಂದರೆ ಕಳೆದ ಎರಡು ಮೂರು ವರ್ಷಗಳಲ್ಲಿ ರಚಿಸಿರುವ "ಸಿ ಮತ್ತು ಡಿ" ವರ್ಗೀಕರಣದೊಳಗೆ ಇದೆ. ಸರಕಾರದ ದಾಖಲೆಯ ಪ್ರಕಾರ ಇವೆಲ್ಲಾ ಜನವಾಸ್ತವ್ಯವಿರದ ಮತ್ತು ಕೃಷಿ ಯೋಗ್ಯವಲ್ಲದ ಬಂಜರು ಭೂಮಿ ಎಂದಿದೆ.

ರಾಜ್ಯದ ಎರಡು ಕರಾವಳಿ ಜಿಲ್ಲೆಗಳಲ್ಲಿ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿ ವರ್ಗೀಕರಿಸಿರುವ ಸುಮಾರು 70,000 ಎಕರೆ ಸರಕಾರಿ ಭೂಮಿಯಲ್ಲಿ ಮುನ್ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಅರಣ್ಯ ಬೆಳೆಸುವ ಯೋಜನೆಯನ್ನು ಸರಕಾರವು ಹಾಕಿಕೊಂಡಿದೆ. ಆದರೆ ಆ ಯೋಜನೆಯು ಜಾರಿಯಾದರೆ ಸಹಸ್ರಾರು ಬಡಜನರ ಮನೆಗಳೂ, ಅವರು ಮಾಡಿರುವ ಕೃಷಿಯೂ ನೆಲಸಮವಾಗುತ್ತವೆ.

ಇರುವ ಸಮೃದ್ಧ ಅರಣ್ಯಗಳನ್ನು ನಾಶಮಾಡಿ, ಬಡಜನರ ಸ್ವಾಧೀನವಿರುವ ಭೂಮಿಯಿಂದ ಅವರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸಿ ಅಲ್ಲಿ ಹೊಸ ಅರಣ್ಯ ಬೆಳೆಸುವ ಕ್ರಮವು ಸರಿ ಅಲ್ಲ! ಬಡಜನರ ಸ್ವಾಧೀನ ವಿರುವ ಸರಕಾರಿ ಭೂಮಿಯು ಅದು ಎಲ್ಲೇ ಇದ್ದರೂ ಮತ್ತು ಅದರ ಸ್ವಾಧೀನ ಯಾವಾಗಲಿಂದಲೇ ಇದ್ದರೂ ಅವರವರಿಗೇ ಸಿಗಬೇಕು. ಬೆಂಗಳೂರು ನಗರದ ಸುತ್ತಲೂ "ಗ್ರೀನ್ ಬೆಲ್ಟ್" ಹಾಕಲು ಮಾಡಿರುವ ಯೋಜನೆಯಿಂದಲೂ ಇದೇ ರೀತಿ ಅನೇಕ ಬಡಜನರು ಬೀದಿ ಪಾಲಾಗಬೇಕಾಗುತ್ತದೆ. ಇರುವ ಅರಣ್ಯಗಳನ್ನು ರಕ್ಷಿಸಬೇಕು. ಹೊಸತಾಗಿ ಅರಣ್ಯ ಬೆಳಸಬೇಕು. ಆದರೆ ಬಡ ಜನರ ಕೃಷಿ ಮತ್ತು ಮನೆಗಳನ್ನು ನಾಶಮಾಡಿ ಅಲ್ಲಿ ಅರಣ್ಯ ಬೆಳಸುವುದು ಸರಿ ಅಲ್ಲ. ಎಷ್ಟೋ ವರ್ಷಗಳ ಹಿಂದಿನಿಂದಲೇ ಬಡಜನರ ಸ್ವಾಧೀನ ವಿರುವ ಅಲ್ಪ ಸ್ವಲ್ಪ ಭೂಮಿಯನ್ನು ಈಗ ಅವು ಹೊಸದಾಗಿ ರಚಿತವಾಗಿರುವ ಪುರಸಭೆ, ಅಥವಾ ಹೊಸತಾಗಿ ವಿಸ್ತರಿಸಲ್ಪಟ್ಟ ಪುರಸಭೆ ಮತ್ತು ನಗರಸಭೆಯ ವಲಯಗಳೊಳಗೆ ಇರುವವೆಂಬ ಕಾರಣವನ್ನು ಹೇಳಿ ಖಾಯಂ ಗೊಳಿಸದಿರುವುದು ತೀರಾ ಅನ್ಯಾಯ. ಸುಮಾರು ಮೂರು ನಾಲ್ಕು ದಶಕಗಳಿಂದಲೂ ಸ್ವಾಧೀನ ವಿರುವ ಅಲ್ಪ ಸ್ವಲ್ಪ ಭೂಮಿಯನ್ನು ಈ ಕಾರಣದಿಂದಲಾಗಿ ಅನೇಕ ಬಡಜನರು ಕಳಕೊಳ್ಳುವಂತಾಗಿದೆ.

ಇದೇ ರೀತಿ "ಕುಮ್ಕಿ" ಭೂಮಿ ಆಗಿರುವುದರಿಂದ ಅದನ್ನು ಖಾಯಂ ಗೊಳಿಸಲಾಗುವುದಿಲ್ಲ ಎಂಬ ಕಾನೂನಿನಿಂದಲಾಗಿ ಅನೇಕ ಕೃಷಿಕರಿಗೆ, ಅದರಲ್ಲೂ ಬಡ ಕೃಷಿಕರಿಗೆ ತುಂಬಾ ತೊಂದರೆಯಾಗುತ್ತಲಿದೆ. ಇನ್ನು ಕೆಲವೆಡೆ ಬೇರೆ ರಾಜ್ಯಗಳಿಂದ ಬಂದವರೆಂಬ ಕಾರಣವನ್ನು ಹೇಳಿ ಭೂಮಿಯನ್ನು ಖಾಯಂ ಗೊಳಿಸುತ್ತಿಲ್ಲ.

ಭೂಮಿಯು ಮಂಜೂರಾಗಿ ಸ್ಥಳ ಮೌಲ್ಯವನ್ನು ಸರಕಾರದ ಖಜಾನೆಗೆ ಕಟ್ಟಲಾಗಿದ್ದರೂ ದ. ಕ. ಜಿಲ್ಲೆಯ ಕೆಲವು ಪ್ರದೇಶಗಳಲ್ಲಿರುವ ಬಡಜನರಿಗೆ ಅವರು ಬೇರೆ ರಾಜ್ಯಗಳಿಂದ ಬಂದಿರುವರೆಂಬ ಕಾರಣವನ್ನು ಹೇಳಿ ಹಕ್ಕು ಪತ್ರವನ್ನು ಕೊಟ್ಟಿಲ್ಲ.

ರಾಜ್ಯದ ಹಲವೆಡೆ, ಮುಖ್ಯವಾಗಿ ಮಧ್ಯ ಮತ್ತು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅರಣ್ಯ ಬೆಳೆಯದಿರುವ ಪ್ರದೇಶಗಳನ್ನು ಸುರಕ್ಷಿತ ಅರಣ್ಯವೆಂದು ಘೋಷಿಸಲಾಗಿದ್ದು, ಇವೆಲ್ಲಾ ಅರಣ್ಯ ಬೆಳೆಸಲು ಉಪಯುಕ್ತ ವಲ್ಲದ ಭೂಮಿಯಾಗಿದೆ. ಅಂಥ ಪ್ರದೇಶಗಳನ್ನು ಭೂರಹಿತ ಬಡವರಿಗೆ ಉಚಿತವಾಗಿ ಹಂಚಿ, ಏನಾದರೂ ಕಾಳು ಬೇಳೆಗಳನ್ನಾದರೂ ಬೆಳೆಯಿಸಲು ಉಪಯೋಗಿಸಬೇಕು.

ಸರಕಾರಿ ಭೂಮಿಯಲ್ಲಿ ವಾಸಿಸುವ ಮತ್ತು ಕೃಷಿಮಾಡಿ ಅದನ್ನು ಅನುಭೋಗಿಸುವ ಬಡಜನರಿಗೆ ಭೂಮಿಯ ಹಕ್ಕು ದೊರಕಿಸಿಕೊಡಲು ಮತ್ತು ಮನೆ ನಿವೇಶನ ವಿಲ್ಲದ ಬಡಜನರಿಗೆ ಮನೆ ನಿವೇಶನ ಹಾಗೂ ಮನೆಕಟ್ಟಲು ಸಹಾಯ ದೊರಕಿಸುವುದಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘವು ಹೋರಾಡುತ್ತಾ ಬಂದಿದೆ.

ಇತ್ತೀಚೆಗೆ ಜನತಾ ಪಕ್ಷದ ಸರಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ 1983 ಮಾರ್ಚ್ 3 ರಂದು ಈ ಬಗ್ಗೆ ಮುಖ್ಯ ಮಂತ್ರಿಯವರಿಗೆ ಮನವಿ ಕೊಡಲಾಯಿತು.

ದ. ಕ. ಜಿಲ್ಲೆಯಲ್ಲಿ ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಸಮಾವೇಶಗಳನ್ನು ನಡೆಸಿ 1983 ಜೂನ್ ರಂದು ಮತ್ತು 1984 ಜನವರಿ 11 ರಂದು ಮುಖ್ಯ ಮಂತ್ರಿಯವರಿಗೆ ಮನವಿಯನ್ನು ಕಳುಹಿಸಲಾಗಿದೆ.

ಬೆಂಗಳೂರಿನಲ್ಲಿ 21-1-1984 ರಂದು ಸರಕಾರಿ ಭೂಮಿಯಲ್ಲಿ ವಾಸಿಸುವ ಬಡಜನರ ಮತ್ತು ನಿವೇಶನ ಇಲ್ಲದವರ ಜಿಲ್ಲಾ ಮಟ್ಟದ ಸಮ್ಮೇಳನ ನಡೆಸಿ, ಕಂದಾಯ ಸಚಿವರಿಗೆ ಮನವಿ ಸಲ್ಲಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಸಮಾವೇಶ ನಡೆದಿದೆ. ಅಲ್ಲೂ ಹೋರಾಟ ಪ್ರಾರಂಭವಾಗಿದೆ. ಧಾರವಾಡ ಬಿಜಾಪುರಗಳಲ್ಲಿ ಹೋರಾಟ ನಡೆಯುತ್ತಿದೆ.

ರಾಜ್ಯದ ಬೇರೆ ಬೇರೆ ಜಿಲ್ಲಾಗಳಲ್ಲಿ ಈ ಕಾರ್ಯಕ್ರಮಗಳು ನಡೆಯುವುದಿದೆ. ಸಮಸ್ಯೆಯು ರಾಜ್ಯ ವ್ಯಾಪಿಯಾಗಿದ್ದು ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿ ತರಬೇಕಾಗಿರುವುದರಿಂದ ಈ ಬಗ್ಗೆ ಸರಕಾರವನ್ನು ಒತ್ತಾಯಿಸಲು ರಾಜ್ಯದಾದ್ಯಂತ ಹೋರಾಡುವುದಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ನಿರ್ಧರಿಸಿದೆ.

ಮಂತ್ರಿಮಂಡಲದ ತೀರ್ಮಾನ :

ಒತ್ತುವರಿ ಮಾಡಿರುವ ಸರಕಾರಿ ಭೂಮಿಯನ್ನು ಖಾಯಂ ಗೊಳಿಸುವುದರ ಬಗ್ಗೆ ಇದೀಗ ಇತ್ತೀಚೆಗೆ ರಾಜ್ಯದ ಮಂತ್ರಿ ಮಂಡಲವು ಒಂದು ನಿರ್ಣಯಕ್ಕೆ ಬಂದಿದೆ. ಆದರೆ ಬಡಜನರು ಸರಕಾರಿ ಜಾಗದಲ್ಲಿ ಒತ್ತುವರಿ ಮಾಡಿರುವ ಭೂಮಿಯು ಅಥವಾ ವಾಸಿಸುವ ಭೂಮಿಯು ಎಲ್ಲೇ ಇದ್ದರೂ, ಅಂದರೆ ಅದು ಪುರಸಭೆ ಮತ್ತು ನಗರಸಭೆ, ಹೊಸ ಫಾರೆಸ್ಟ್ ಮತ್ತು ಫಾರೆಸ್ಟ್ ಗಡಿ, "ಸಿ ಮತ್ತು ಡಿ, ವರ್ಗೀಕರಣ ಪ್ರದೇಶ, ಪರಂಬೋಕು, ಗೋಮಾಳ, ಕುಮ್ಕಿ ಮತ್ತು ಇನ್ನೆಲ್ಲೇ ಇದ್ದರೂ, ಮತ್ತು ಯಾವಾಗಲಿಂದಲೇ ಸ್ವಾಧೀನವಿದ್ದರೂ ಅದನ್ನು ಅವರವರಿಗೇ ಖಾಯಂ ಗೊಳಿಸುವ ಸ್ಪಷ್ಟ ತೀರ್ಮಾನವು ಬೇಕು.

ಬಡಜನರಿಂದ ಏನೇನೂ ದಂಡ ವಸೂಲಿಮಾಡದೆ ಅವರಿಗೆ ಉಚಿತವಾಗಿ ಹಕ್ಕು ಪತ್ರದೊರೆಯುವಂತಾಗಬೇಕು. ಹೊಸದಾಗಿ ಅರ್ಜಿ ಸಲ್ಲಿಸಲು ಮಂತ್ರಿ ಮಂಡಲದ ತೀರ್ಮಾನದ ಪ್ರಕಾರ ಒಂದು ತಿಂಗಳ ಕಾಲಾವಕಾಶದ ಬದಲು ಕನಿಷ್ಠ ಎರಡು ವರ್ಷಗಳ ಕಾಲಾವಕಾಶವಾದರೂ ಬೇಕು.

ದೊಡ್ಡ ಭೂಮಾಲಿಕರು ಮತ್ತು ಪ್ಲಾಂಟರುಗಳ ಸ್ವಾಧೀನ ವಿರುವ ಸರಕಾರಿ ಭೂಮಿಯನ್ನು ಅವರಿಂದ ಬಿಡಿಸಿ ಭೂರಹಿತ ಬಡಜನರಿಗೆ ಉಚಿತವಾಗಿ ಹಂಚಬೇಕು.

ಈ ಎಲ್ಲಾ ಅಂಶಗಳನ್ನು ಸೇರಿಸಿಕೊಂಡು ಮಂತ್ರಿ ಮಂಡಲದ ತೀರ್ಮಾನದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಕಂದಾಯ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ತಂದಿಲ್ಲವಾದರೆ ರಾಜ್ಯದಲ್ಲಿ ಲಕ್ಷಾಂತರ ಮಂದಿ ಬಡಜನರಿಗೆ ಭೂಮಿಯ ಹಕ್ಕು ದೊರೆಯಲಾರದು. ಬದಲು ಈಗಾಗಲೇ ಸಾಕಷ್ಟು ಉಳ್ಳವರಿಗೇ ಇನ್ನೂ ಹೆಚ್ಚಿಗೆ ಭೂಮಿ ದೊರೆಯುವಂತಾದೀತು.

ಸರಕಾರಿ ಭೂಮಿಯನ್ನು ಖಾಯಂ ಗೊಳಿಸಿ ಹಕ್ಕು ಪತ್ರ ಕೊಡುವ ಕೆಲಸ ಮತ್ತು ಭೂಸುಧಾರಣ ಕಾಯ್ದೆ ಜಾರಿಗೊಳಿಸುವಂತಹ ಕೆಲಸ ಹೆಚ್ಚು ಸಮರ್ಪಕವಾಗಿ ಬಡಜನತೆಗೆ ನ್ಯಾಯದೊರೆಯುವಂತಾಗ ಬೇಕಾದರೆ ಭೂವಿತರಣ ಸಮಿತಿ ಮತ್ತು ಭೂನ್ಯಾಯ ಮಂಡಲಿಗಳಲ್ಲಿ ರೈತ ಸಂಘಗಳಿಗೂ, ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳಿಗೂ ಪ್ರಾತಿನಿಧ್ಯ ಇರಬೇಕು. ಕರ್ನಾಟಕ ಪ್ರಾಂತ ರೈತ ಸಂಘವು ಈ ಬಗ್ಗೆ ಹಲವಾರು ಬಾರಿ ಹೇಳಿರುವುದಾದರೂ, ಜನತಾ ಪಕ್ಷದ ಸರಕಾರವು ಇದಕ್ಕೆ ತೀರಾ ವ್ಯತಿರಿಕ್ತವಾಗಿ ಈ ಸಮಿತಿಗಳ ರಚನೆ ಮಾಡಿದೆ. ಸ್ಥಾಪಿತ ಹಿತಾಸಕ್ತಿಗಳ ಪರವಾಗಿರುವವರನ್ನೆ ಬಹಳಷ್ಟು ಕಡೆ ಈ ಸಮಿತಿಗಳಲ್ಲಿ ತುಂಬಲಾಗಿದೆ. ಇದು ಸರಿ ಅಲ್ಲ. ಈ ಸಮಿತಿಗಳನ್ನು ಪುನರ್ರಚಿಸಲೇ ಬೇಕು.

ಈ ಎಲ್ಲಾ ಅಂಶಗಳ ಬಗ್ಗೆ ಸರಕಾರದ ಗಮನ ಸೆಳೆದು, ಈ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲು ಜನವರಿ 11 ರಂದು ಮಂಗಳೂರಿನಲ್ಲೂ ಜನವರಿ 21 ರಂದು ಬೆಂಗಳೂರಿನಲ್ಲೂ ಜಿಲ್ಲಾ ಸಮಾವೇಶಗಳನ್ನು ನಡೆಸಲಾಗಿದೆ, ಉಳಿದ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮವನ್ನು ಹಾಕಲಾಗುತ್ತಿದೆ.

ಸರಕಾರದ ಕಡೆಯಿಂದ ಫೆಬ್ರವರಿ 11 ರೊಳಗೆ ಮನವಿಗೆ ಉತ್ತರ ಮತ್ತು ಸ್ಪಷ್ಟ ಹಾಗೂ ನಿರ್ದಿಷ್ಟ ಕ್ರಮಗಳು ಕಂಡು ಬಂದಿಲ್ಲವಾದರೆ ಜಿಲ್ಲೆಯ ಮೂಲೆ ಮೂಲೆಗಳಿಂದ ಸರಕಾರಿ ಭೂಮಿಯಲ್ಲಿ ವಾಸಿಸುವ ಸಹಸ್ರಾರು ಬಡಜನರು ಕಾಲ್ನಡೆ ಜಾತಾ ಬಂದು ಮಂಗಳೂರಲ್ಲಿ ಜಿಲ್ಲಾಧಿಕಾರಿಯವರ ಕಛೇರಿ ಎದುರು ನಿಲುವಕ್ತಿಂಟು ತಾಸುಗಳ ಬೃಹತ್ ಸಾಮೂಹಿಕ ಸತ್ಯಾಗ್ರಹವನ್ನು ನಡೆಸಲೂ ತೀರ್ಮಾನಿಸಲಾಗಿದೆ. ಈ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯಲು ಮತ್ತು ಸರಕಾರವನ್ನು ಒತ್ತಾಯಿಸಲು ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯದ ರಾಜಧಾನಿಯಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮ ಹಾಕಲು ಯೋಚಿಸುತ್ತಿದೆ.

ಭೂಮಿಯ ಹಕ್ಕಿಗಾಗಿ ಹೋರಾಡುವಾಗಲೇ ರೈತರು ಬೆಳೆಸಿದ ಬೆಳೆಗಳಿಗೆ ಲಾಭದಾಯಕ ಬೆಲೆ ಮತ್ತು ಕೃಷಿ ಕೂಲಿಗಾರರಿಗೆ ನ್ಯಾಯವಾದ

(5 ನೇ ಪುಟ ನೋಡಿ)

ಸಾಧನೆಯ ಸಂವತ್ಸರ ಭರವಸೆಗಳ ಈಡೇರಿಕೆಯ ದೃಢಸಂಕಲ್ಪ

ಒಂದು ವರ್ಷದ ಹಿಂದೆ ಜನತೆ ನೀಡಿದ ನಿರ್ಣಯದಂತೆ ಕರ್ನಾಟಕದಲ್ಲಿ 10 ನೇ ಜನವರಿ 1983 ರಂದು ಜನತಾ ಸರ್ಕಾರ ಅಧಿಕಾರಕ್ಕೆ ಬಂದಿತು. ತನ್ನ ಆಡಳಿತದ ಪ್ರಥಮ ವಾರ್ಷಿಕ ದಿನದಂದು ಜನತೆಗೆ ಒಂದು ವರ್ಷದ ಹಿಂದೆ ತಾವು ನೀಡಿದ್ದ ಭರವಸೆಗಳನ್ನು ಬಹುತೇಕ ಈಡೇರಿಸಿದ ಸಮಾಧಾನ ಸರ್ಕಾರಕ್ಕಿದೆ. ನೀಡಿದ್ದ ಆಶ್ವಾಸನೆ ಮತ್ತು ಸಾಧಿಸಿರುವ ಪ್ರಗತಿಯ ಚಿತ್ರ ಇಂದು ಜನತೆಯ ಮುಂದಿದೆ.

ಸ್ವಚ್ಛ ಆಡಳಿತ

ಅಧಿಕಾರದ ಎಲ್ಲ ರಂಗಗಳಲ್ಲೂ ಭ್ರಷ್ಟಾಚಾರ ನಿವಾರಣೆಗೆ ಲೋಕಾಯುಕ್ತರ ನೇಮಕ ಮುಖ್ಯ ಮಂತ್ರಿಗಳೂ ಸೇರಿದಂತೆ ಸಾರ್ವಜನಿಕ ರಂಗದ ಎಲ್ಲ ಅಧಿಕಾರಿಗಳೂ ಇದರ ವ್ಯಾಪ್ತಿಗೆ ಒಳಪಡುವರು ಸಾರ್ವಜನಿಕರ ಕುಂದುಕೊರತೆಗಳ ಶೀಘ್ರ ನಿವಾರಣೆಗಾಗಿಯೇ ಒಂದು ಪ್ರತ್ಯೇಕ ಸಚಿವ ಶಾಖೆ. ಪಕ್ಷಾಂತರ ನಿಷೇಧಕ್ಕೆ ಮಸೂದೆ.

ಆಡಳಿತ ವಿಕೇಂದ್ರೀಕರಣ

ಜಿಲ್ಲಾ ಪರಿಷತ್ತುಗಳು ಮಂಡಳ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ರಚನೆಗಾಗಿ ಪಂಚಾಯತ್ ರಾಜ್ಯ ಮಸೂದೆ. ಅಧಿಕಾರ ವಿಕೇಂದ್ರೀಕರಣದ ದಿಸೆಯಲ್ಲಿ ಇನ್ನೊಂದು ದಿಟ್ಟ ಹೆಜ್ಜೆ.

* ಪ್ರಥಮಬಾರಿಗೆ ನಗರ ಸಭೆ ಮತ್ತು ಪುರಸಭೆಗಳಿಗೆ ಚುನಾವಣೆ ನಡೆಸಿದ ಹೆಮ್ಮೆ.
* ಹದಿನೆಂಟು ವರ್ಷ ತುಂಬಿದವರಿಗೆಲ್ಲ ನಗರ–ಪುರಸಭಾ ಚುನಾವಣೆಗಳಲ್ಲಿ ಮತಾಧಿಕಾರ ವಿಸ್ತರಣೆ.
* ನಗರಸಭೆ ಹಾಗೂ ಪುರಸಭೆಗಳಲ್ಲಿ ಮಹಿಳೆಯರಿಗೆ ಶೇ 20 ಸ್ಥಾನಗಳ ಮೀಸಲು.

ಕನ್ನಡಕ್ಕೆ ಅಗ್ರಸ್ಥಾನ

* ಶಾಲೆಗಳಲ್ಲಿ ಕನ್ನಡ ಕಲಿಕೆ ಕಡ್ಡಾಯ
* ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡದ ಬಳಕೆ, ಕಣ್ಣಿಟ್ಟು ನೋಡಲು ಕಾವಲು ಸಮಿತಿ.

ಗ್ರಾಮೀಣ ಅಭಿವೃದ್ಧಿ

* ಎರಡು ವರ್ಷಗಳಲ್ಲಿ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಪೂರೈಕೆ. ಇದುವರೆಗೆ 1600ಕ್ಕೂ ಹೆಚ್ಚು ಕೊಳವೆ ಬಾವಿಗಳ ನಿರ್ಮಾಣ.
* ಗ್ರಾಮೀಣ ಬಡಜನರಿಗೆ ವರ್ಷವಿಡೀ ಉದ್ಯೋಗ ನೀಡುವ ಸಲುವಾಗಿ ಗ್ರಾಮೀಣ ಉದ್ಯೋಗ ಯೋಜನೆ.
* ರೈತರಿಗೆ 36 ಕೋಟಿ ರೂ. ಯಷ್ಟು ವಿವಿಧ ರಿಯಾಯಿತಿಗಳು ಸಾಲಗಳ ಮನ್ನಾ, ನೀರಿನ ತೆರಿಗೆಯಲ್ಲಿ ವಿನಾಯಿತಿ ವಿಫಲವಾದ ನೀರಾವರಿ ಬಾವಿಗಳಿಗೆ ಸಹಾಯಧನ
* 80,000 ಹೆಕ್ಟೇರುಗಳಷ್ಟು ಹೆಚ್ಚುವರಿ ಭೂಮಿಗೆ ನೀರಾವರಿ ವಿಸ್ತರಣೆ
* ಎಲ್ಲಾ ವಸತಿರಹಿತ ಕೃಷಿಕರಿಗೆ ಇನ್ನೆರಡು ವರ್ಷಗಳಲ್ಲಿ ಗೃಹ ನಿವೇಶನಗಳ ಹಂಚಿಕೆ—ಜನತಾ ಮನೆಗಳ ನಿರ್ಮಾಣಕ್ಕಾಗಿ ಈ ವರ್ಷ 12 ಕೋಟಿ ರೂ. ವೆಚ್ಚ
* ಕಡು ಬಡವರ ಉದ್ಧಾರಕ್ಕಾಗಿ 45 ತಾಲ್ಲೂಕುಗಳಲ್ಲಿ ಅಂತ್ಯೋದಯ ಯೋಜನೆ ಆರಂಭ.

ಕೈಗಾರಿಕೆ

* ಹೊಸ ಕೈಗಾರಿಕಾ ನೀತಿಯಂತೆ ಪ್ರತಿವರ್ಷ 1000 ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವ ಸಂಕಲ್ಪ.
* ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳಿಗೆ ವಿಶೇಷ ಉತ್ತೇಜನ, ಮುಂದಿನ 5 ವರ್ಷಗಳಲ್ಲಿ 20,000 ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ಸ್ಥಾಪನೆಯ ಗುರಿ.

ಶಿಕ್ಷಣ

* ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಸಮಗ್ರ ಮಸೂದೆಯ ಮಂಡನೆ.
* "ಅಕ್ಷರ ಸೇನೆ" ಅನಕ್ಷರತೆಯ ನಿರ್ಮೂಲನಕ್ಕಾಗಿ ಕೈಗೊಂಡಿರುವ ಒಂದು ಬೃಹತ್ ಯೋಜನೆ.
* ಕರ್ನಾಟಕ ವಿದ್ಯಾರ್ಥಿಗಳಿಗೆ ಇಲ್ಲಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕದಿಂದ ವಿನಾಯಿತಿ.
* ಮುಂದಿನ 5 ವರ್ಷಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ಹಂತ ಹಂತವಾಗಿ ತೊಡೆದು ಹಾಕಲು ಸುಗ್ರೀವಾಜ್ಞೆಯ ಜಾರಿ.

ಸಮಾಜ ಕಲ್ಯಾಣ

* ಪ್ರತಿಭಾವಂತ ಹರಿಜನ, ಗಿರಿಜನ ಪದವೀಧರರಿಗೆ ಸರ್ಕಾರದ ಗೆಜೆಟೆಡ್ ಹುದ್ದೆಗಳಿಗೆ ನೇರ ನೇಮಕಾವಕಾಶ.
* ದೇವದಾಸಿ ಪದ್ಧತಿಯ ನಿರ್ಮೂಲನೆ
* ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೀಡಲಾಗುತ್ತಿರುವ ವಿದ್ಯಾರ್ಥಿವೇತನ ಮೊತ್ತದ ಹೆಚ್ಚಳ
* ಹಿಂದುಳಿದ ವರ್ಗಗಳ ಏಳಿಗೆಗಾಗಿ ದ್ವಿತೀಯ ಹಿಂದುಳಿದ ವರ್ಗಗಳ ಆಯೋಗ ಹಾಗೂ ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಪ್ರಥಮ ಬಾರಿಗೆ ಅಲ್ಪ ಸಂಖ್ಯಾತರ ಆಯೋಗಗಳ ರಚನೆ.

ಉದ್ಯೋಗ

* 24,000 ದಿನಗೂಲಿ ಕಾರ್ಮಿಕರಿಗೆ ಖಾಯಂ ಉದ್ಯೋಗದ ಭರವಸೆ
* ಕಡಿಮೆ ಆದಾಯದ ಪತ್ರಿಕೋದ್ಯೋಗಿಗಳಿಗೆ ನಿವೃತ್ತಿ ವೇತನ ಮತ್ತು ವೈದ್ಯಕೀಯ ಸೌಲಭ್ಯಗಳ ನೀಡಿಕೆ.
* ಜನ ಸಮುದಾಯ ಸಮಗ್ರ ಪ್ರಗತಿಗೆ ನೆರವಾಗುವ ಇಂತಹ ನೂರಾರು ಪ್ರಗತಿಪರ ಕಾರ್ಯಕ್ರಮಗಳ ಮುನ್ನಡೆ

ಈ ಸಾಧನೆಯ ಹಾದಿಯಲ್ಲಿ ಎದುರಿಸಿದ ಅಡ್ಡಿ ಆತಂಕಗಳು ಅಸಂಖ್ಯಾತ. ಆದರೂ ಜನತೆಯ ಆಶೋತ್ತರಗಳ ಕನಸನ್ನು ನನಸಾಗಿಸಲು ಆದರಲ್ಲಿಯೂ ಕಡುಬಡವರ ಏಳಿಗೆಯನ್ನು ಸಾಧಿಸಲು ಸರ್ಕಾರ ದೃಢ ಸಂಕಲ್ಪ ಹಾಗೂ ಸಮರ್ಪಣಾಭಾವದಿಂದ ಅವಿರತ ಶ್ರಮಿಸುತ್ತಿದೆ ಮುಂದೆಯೂ ಶ್ರಮಿಸುತ್ತದೆ

ಜನತೆಯ ಆಶೋತ್ತರಗಳಿಗೆ ಸದಾಮಿಡಿಯುವ ಸರ್ಕಾರ—"ಜನತಾ ಸರ್ಕಾರ"

ಕರ್ನಾಟಕ ವಾರ್ತೆ

ಡಿ. ವೈ. ಎಫ್. ಐ. ಎರಡನೇ ರಾಜ್ಯ ಸಮ್ಮೇಳನ

ಕರ್ನಾಟಕ ರಾಜ್ಯದ ಡಿ. ವೈ. ಎಫ್. ಐ. ಎರಡನೇ ಸಮ್ಮೇಳನ 1983, ಡಿಸೆಂಬರ್ 9-11 ರಂದು ಹೊಸಪೇಟೆಯಲ್ಲಿ ನಡೆಯಿತು. ರಾಜ್ಯ ಸಂಚಾಲಕರಾದ ಕಾ. ಎಸ್. ಶಿವರಾಂ ಅವರು ಧ್ವಜಾರೋಹಣ ಮಾಡಿದ ನಂತರ, ರಾಷ್ಟ್ರದ ಸಮಗ್ರತೆಗಾಗಿ ಮತ್ತು ಸಂಘಟನೆಗಾಗಿ ದುಡಿದುಹುತಾತ್ಮರಾದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವದರೊಂದಿಗೆ ಸಮ್ಮೇಳನ ಪ್ರಾರಂಭವಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರೂ, ಶಾಸಕರೂ ಆದ ಕಾ. ರಾಮಚಂದ್ರ ರಾವ್ ಅವರು ಸಮ್ಮೇಳನವನ್ನು ಉದ್ಘಾಟಿಸುತ್ತ ಸ್ವಾತಂತ್ರ ಪೂರ್ವದ ಮತ್ತು ಸ್ವಾತಂತ್ರ್ಯ ನಂತರದ ಯುವ ಜನರ ಪಾತ್ರ ಮತ್ತು ರಾಷ್ಟ್ರದ ಸಮಗ್ರತೆಗಾಗಿಯೂ ಹಾಗೂ ಜನತೆಯ ಸಾಮಾನ್ಯ ವಿಷಯಗಳನ್ನು ಕೈಗೆತ್ತಿ ಕೊಂಡು ಯುವ ಜನರನ್ನು ಒಂದು ವೇದಿಕೆಯತ್ತ ತರುವ ಡಿ ವೈ. ಎಫ್. ಐ ನ ಪಾತ್ರ ಮಹತ್ವ ಪೂರ್ಣವಾಗಿದೆಂದು ಹೇಳಿದರು. ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿಯ ಹಿರಿಯ ಮುಖಂಡರಾದ ಎನ್ ಕೆ ಉಪಾಧ್ಯಾಯ ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಸಿ. ನಂಜುಂಡಪ್ಪ, ಕಾರ್ಮಿಕ ಮುಖಂಡರಾದ ವಿ ಜೆ. ಕೆ ನಾಯರ್, ರೈತ ಮುಖಂಡ. ವಿ. ಎನ್ ಹಳಕಟ್ಟಿಯವರೆಲ್ಲ ಭಾಷಣಮಾಡಿದರು. ಎಸ್. ಎಸ್. ಹಿರೇಮಠ ಅವರು ಜಾತೀಯತೆ ಮತ್ತು ಯುವ ಜನತೆ ಎಂಬ ವಿಷಯದ ಮೇಲೆ ಭಾಷಣ ಮಾಡಿದರು.

ರಾಜ್ಯ ಸಂಚಾಲಕರಾದ ಕಾ. ಶಿವರಾಂ ಅವರು ಚಟುವಟಿಕೆಗಳ ವರದಿ ಸಲ್ಲಿಸಿದರು. ಹನ್ನೊಂದು ಜನ ಮಹಿಳೆಯರನ್ನೊಳಗೊಂಡು 132 ಪ್ರತಿನಿಧಿಗಳ ಪರವಾಗಿ 20 ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗ ವಹಿಸಿದ್ದರು.

ಡಿ. ವೈ. ಎಫ್. ಐ.ನ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯವರೂ, ಸಂಸತ್ ಸದಸ್ಯರೂ ಆದ ಕಾ. ಹನನ್ ಮುಲ್ಲಾ ಅವರು ಸಂಘಟನೆಯ ಕುರಿತು ವಿವರವಾಗಿ ಮಾತಾಡಿ ಕೆಳ ಘಟಕಗಳು ಮೇಲಿನ ಘಟಕಗಳಿಗೆ ಪೂರಕವಾಗಿ ತಾಯಿಬೇರಿ ನಂತೆ ಬೆಳೆದು ಬರುವುದು ಅತ್ಯಗತ್ಯವೆಂದೂ ಇಲ್ಲವಾದರೆ ಸಂಘಟನೆಯಲ್ಲಿ ಶಿಥಿಲತೆ ಸೇರಿಕೊಂಡು ಶಿಸ್ತು ಬದ್ಧವಾಗಿ ಬೆಳೆಯಬೇಕಾದ ಯುವ ಸಂಘಟನೆಗೆ ಹಾನಿಯಾಗುತ್ತದೆಂದೂ ಹೇಳಿದರು.

ಸಮ್ಮೇಳನದ ಕೊನೆ ದಿವಸ ಸಿ. ಐ. ಟಿ ಯು ಅಧ್ಯಕ್ಷ ಮತ್ತು ಶಾಸಕರಾದ ಕಾ. ಸೂರ್ಯನಾರಾಯಣ ರಾವ್ ಅವರು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿ ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು.

ಡಿ. ವೈ. ಎಫ್. ಐ. ಹೊಸ ರಾಜ್ಯ ಸಮಿತಿ.

ಮಹಾಬಲ ವಡೇರ ಹೊಬ್ಳಿ ಅಧ್ಯಕ್ಷ, ಕೆ ವಿ ಸತ್ಯನಾರಾಯಣ ಉಪಾಧ್ಯಕ್ಷ, ಎಸ್. ಶಿವರಾಂ ಕಾರ್ಯದರ್ಶಿ, ಜಯರಾಂ ಸಹ ಕಾರ್ಯದರ್ಶಿ ಜಯಶೇಖರ, ಖಜಾಂಚಿ, ಸದಸ್ಯರುಗಳು ಆರ್. ಗುರುಸ್ವಾಮಿ, ಶ್ರೀನಿವಾಸ ಗೌಡ, ಜಿ. ಎನ್. ದೇಶಪಾಂಡೆ, ಚಿದಾನಂದ ತೆಗ್ಗಿಹಳ್ಳಿ, ಸಂಘಶೆಟ್ಟಿ ಪಾಟೀಲ, ಜಂಬಯ್ಯ ನಾಯಕ, ರಾಮಚಂದ್ರ ನಾವಡ, ಸುನೀಲ ನಾಟೇಕರ್ ಫ್ರಾನ್ಸಿಸ್.

ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್‌ನ ಸಮಾವೇಶ

ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ ತನ್ನ 3 ನೇ ಅಖಿಲ ಭಾರತ ಸಮ್ಮೇಳನವನ್ನು ಜನವರಿ 7 ರಿಂದ 10 ರವರೆಗೆ ಮೈಸೂರಿನಲ್ಲಿ ನಡೆಸಿತು.

ಸಮ್ಮೇಳನದ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಕಾ. ಪಿ. ರಾಮಮೂರ್ತಿಯವರು ಬ್ಯಾಂಕ್ ನೌಕರರನ್ನು ಉದ್ದೇಶಿಸಿ ಮಾತನಾಡುತ್ತ, ಸಿಂಡಿಕೇಟ್ ಬ್ಯಾಂಕಿನ ಹಳೆಯ ಅಧ್ಯಕ್ಷ ಶ್ರೀ ರಘುಪತಿ ಯವರ ಮೇಲಿದ್ದ ಭ್ರಷ್ಟಾಚಾರದ ಅಪಾದನೆಯ ವಿರುದ್ಧ ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ ನಡೆಸಿದ ಹೋರಾಟದ ಬಗ್ಗೆ ಶ್ಲಾಘಿಸಿ ಈ ಬಗ್ಗೆ ಸಿ. ಐ. ಟಿ. ಯು. ನ ಪಾತ್ರವನ್ನೂ ಕುರಿತು ಹೇಳಿದರು. ಬ್ಯಾಂಕ್ ನೌಕರರು ಕಂಪ್ಯೂಟರ್ ವಿರುದ್ಧ ಹೋರಾಟ ಮಾಡಬೇಕೆಂದು ಕರೆಕೊಟ್ಟರು. ಸಮ್ಮೇಳನವು ಮೂರು ದಿನ ನಡೆದು ಪ್ರಗತಿಶೀಲ ಸಂಘಟನೆಯಾದ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾದೊಡನೆ ವಿಲೀನಗೊಳ್ಳುವ ನಿರ್ಣಯ ಮಾಯಿತು. ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಕಾ ಆಶಿಷ್ ಸೇನ್‌ರವರು ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ನನ್ನು ಸ್ವಾಗತಿಸಿ ಬ್ಯಾಂಕ್ ನೌಕರರ ಈಗಿನ ಸಮಸ್ಯೆಗಳ ಕುರಿತು ವಿವೇಚಿಸಿದರು.

ನೂತನ ಸಾಲಿಗೆ ಕಾ ಎಂ. ಎಸ್. ಎನ್. ರಾವ್ ಪ್ರಧಾನ ಕಾರ್ಯದರ್ಶಿಯಾಗಿ ಕಾ. ಯು. ಎಸ್. ಎ. ನಾಯಕ್ ಉಪ ಪ್ರಧಾನ ಕಾರ್ಯದರ್ಶಿ ಯಾಗಿ ಚುನಾಯಿತರಾದರು, ಸಮ್ಮೇಳನದಲ್ಲಿ ಸುಮಾರು ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿದ್ದರು

ವಿಶ್ವಶಾಂತಿ ಸಪ್ತಾಹ

ಸಿ. ಪಿ. ಐ (ಎಂ) ಕರ್ನಾಟಕ ರಾಜ್ಯ ಸಮಿತಿಯು ಅಮೇರಿಕದ ಅಧ್ಯಕ್ಷ ರೇಗನ್ ಅವರ ಯುದ್ಧ ನೀತಿಯ ವಿರುದ್ಧ ಜಗತ್ತಿನಲ್ಲಿ ಶಾಂತಿ ನೆಲೆಸುವಂತಾಗಬೇಕೆಂದು ಪಾರ್ಟಿ ಘಟಕಗಳೂ ಸಾಮೂಹಿಕ ಸಂಘಟನೆಗಳೂ ಫೆಬ್ರವರಿ 1 ರಿಂದ 7 ರವರೆಗೆ ಪ್ರಚಾರ ಸಪ್ತಾಹವನ್ನು ನಡೆಸಬೇಕೆಂದು ಕರೆಕೊಟ್ಟಿದ್ದು, ರಾಜ್ಯದ ಹಲವಾರು ಕಡೆಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಸಾಮ್ರಾಜ್ಯ ಶಾಹಿಗಳ ಯುದ್ಧ ತಯಾರಿ, ಮೂರನೇ ಮಹಾ ಯುದ್ಧದಿಂದ ಮಾನವ ಜನಾಂಗದ ಮೇಲೆ ಆಗಬಹುದಾದ ಅಪಾರ ಹಾನಿ, ವಿಶ್ವ ಶಾಂತಿಗಾಗಿ ಜಗತ್ತಿನಾದ್ಯಂತ ನಡೆಯುತ್ತಿರುವ ಸಂಘಟಿತ ಸಾಮೂಹಿಕ ಚಳುವಳಿಯ ಕುರಿತು ರಾಜ್ಯ ಸಮಿತಿ ಹೊರಡಿಸಿರುವ ಪುಸ್ತಕದ 5000 ಪ್ರತಿಗಳು ಮಾರಾಟವಾಗಿವೆ. ಸಾವಿರಾರು ಕರ ಪತ್ರಗಳೂ ನಾಗರೀಕರ ಕೈ ಸೇರಿವೆ

ಮಂಗಳೂರು

ಫೆಬ್ರವರಿ 7ರಂದು ಮಂಗಳೂರಿನಲ್ಲಿ ಸಾವಿರಾರು ಕಾರ್ಮಿಕರ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ರಾಜ್ಯ ಸಮಿತಿ ಕಾರ್ಯದರ್ಶಿಯವರೂ ಶಾಸಕರೂ ಆದ ರಾಮಚಂದ್ರ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಶಾಸಕರೂ, ಸಿ. ಐ. ಟಿ ಯು ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಅವರು ಇಡೀ ಜಗತ್ತನ್ನೆ ನಾಶ ಮಾಡುವ ಸಾಮ್ರಾಜ್ಯ ಶಾಹಿಗಳ ಯುದ್ಧ ಕೋರ ನೀತಿಯ ವಿರುದ್ಧ ಜನಾಭಿಪ್ರಾಯವನ್ನು ಕ್ರೋಢೀಕರಿಸಿ ಜಗತ್ತನ್ನು ಯುದ್ಧದ ಭೀತಿಯಿಂದ ತಪ್ಪಿಸಲು ಚಳುವಳಿ ಮುಂದುವರಿಸಬೇಕೆಂದು ಕರೆಕೊಟ್ಟರು. ಜಿಲ್ಲಾ ಕಾರ್ಯದರ್ಶಿ ಶ್ರೀಯಾನ್ ಅವರು ಸ್ವಾಗತಿಸಿದರು

ಮೈಸೂರು

ಕರ ಪತ್ರ ಹಂಚುವಿಕೆ, ಪುಸ್ತಕ ಮಾರಾಟದ ಮೂಲಕ ಪ್ರಾರಂಭವಾದ ಶಾಂತಿಗಾಗಿ ಯುದ್ಧ ವಿರೋಧವಾಗಿ ಪ್ರಾರಂಭವಾದ ಸಪ್ತಾಹ ಫೆಬ್ರವರಿ 7 ರಂದು ಸಾರ್ವಜನಿಕ ಸಭೆಯಲ್ಲಿ ಮುಕ್ತಾಯವಾಯಿತು. ಸಿ. ಪಿ. ಐ (ಎಂ) ಮುಖಂಡರಾದ ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೋಹನ್‌ಕುಮಾರ ಅವರು ಸ್ವಾಗತ ಭಾಷಣ ಮಾಡಿದರು. ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್ ಕೆ ಉಪಾಧ್ಯಾಯರು ಭಾಷಣ ಮಾಡಿ, ಸೋವಿಯತ್ ರಷ್ಯಾವನ್ನೊಳಗೊಂಡು ಸಮತಾವದಿ ದೇಶಗಳನ್ನ ನಾಶಮಾಡುವ ಪ್ರಾದೇಶಿಕ ಯುದ್ಧ ಸೃಷ್ಟೀ ತನ್ನ ಹೋರಾಟ ಸೀಮಿತವಾಗಿದೆಂದು ಅಮೇರಿಕದ ಅಧ್ಯಕ್ಷ ರೇಗನ್‌ರ ವಾದವನ್ನು ನಿರಾಕರಿಸಿ, ಇಡೀ ಮಾನವ ಕುಲವನ್ನೇ ನಾಶ ಮಾಡಿ ಜಗತ್ತಿನ ಮೇಲೆ ತನ್ನ ಸಾಮ್ರಾಜ್ಯ ಶಾಹಿಯನ್ನು ಹೇರುವ ಕೀಯ ನೀತಿ ಅವರದಾಗಿರುವುದರಿಂದ ಜನತೆ ಹಾಗೆಯೇ ಕಾರ್ಮಿಕ ವರ್ಗ ಜಾಗ್ರತರಾಗಿ ಯುದ್ಧ ನೀತಿಯನ್ನು ವಿರೋಧಿಸ ಬೇಕೆಂದು ಕರೆನೀಡಿದರು

ಕೋಲಾರ ಜಿಲ್ಲೆ

ಕೆ. ಜಿ. ಎಫ್. ನ ಆಂಡರ್‌ಸನ್ ಪೇಟೆ ರಾಬರ್ಟ್‌ಸನ್‌ಪೇಟೆ ಕೋಲಾರಗಳಲ್ಲಿ ಯುದ್ಧ ವಿರೋಧಿ ಸಾರ್ವಜನಿಕ ಸಭೆಗಳು ನಡೆದವು, ಕಾ. ಸವರೀದಾಸ್, ಟಿ. ಎಸ್. ಮಣಿ, ಅನಂತರಾಂ ಮೊದಲಾದವರು ಈ ಸಭೆಗಳಲ್ಲಿ ಭಾಷಣ ಮಾಡಿದರು ಸಾವಿರಾರು ಕರ ಪತ್ರ ಪೋಸ್ಟರಗಳ ಮೂಲಕವೂ ಶಾಂತಿಗಾಗಿ ನಡೆಯುವ ಚಳುವಳಿಯ ಮಹತ್ವದ ಕುರಿತು ಜನರಲ್ಲಿ ಜಾಗೃತಿಯನ್ನುಂಟು ಮಾಡಲಾಯಿತು

(ಇತರೆಕಡೆಗಳವರದಿ ಮುಂದಿನ ವಾರ)

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಳಿಯ ಸದಸ್ಯರ ಗಮನಕ್ಕೆ

ಸಿ. ಐ. ಟಿ ಯು ಕರ್ನಾಟಕ ರಾಜ್ಯ ಸಮಿತಿಯ ಸಭೆಯು 18-2-1984 ರಂದು, ರಾಜ್ಯ ಮಂಡಳಿಯ ಸಭೆಯು 19 ಮತ್ತು 20-2-1984 ರಂದು ದಾಂಡೇಲಿಯಲ್ಲಿ ನಡೆಯುತ್ತದೆ. ರಾಜ್ಯ ಸಮಿತಿಯ ಸದಸ್ಯರು 17ರ ಸಂಜೆ ಅಥವಾ 18ರ ಬೆಳಗ್ಗೆ, ರಾಜ್ಯ ಮಂಡಳಿಯ ಸದಸ್ಯರು 18ರ ಸಂಜೆ ಅಥವಾ 19ರ ಬೆಳಗ್ಗೆ ದಾಂಡೇಲಿಯನ್ನು ತಲುಪಬೇಕು. ಸಭೆಯ ನೋಟೀಸನ್ನು ಈಗಾಗಲೇ ಎಲ್ಲಾ ಸದಸ್ಯರಿಗೆ ಅಂಚೆಯ ಮೂಲಕ ರವಾನಿಸಲಾಗಿದೆ.

ಸಿ ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ ಐ ಟಿ ಯು ಕರ್ನಾಟಕ ರಾಜ್ಯ ಸಮಿತಿ

ದೊಡ್ಡಬಳ್ಳಾಪುರ ಘಟನೆ ಸರಕಾರಕ್ಕೆ ಎಚ್ಚರಿಕೆ

(2ನೇ ಪುಟದಿಂದ)

ನೇಕಾರರು, ಕಾರ್ಮಿಕರು ಸಿಟ್ಟಿಗೆದ್ದು ಪ್ರತಿಭಟನೆ ಮಾಡಲಿದ್ದಾರೆಂಬುದನ್ನು ಜನತಾ ಸರಕಾರ ಅರ್ಥಮಾಡಿಕೊಳ್ಳಲೇ ಬೇಕು.

ಕಾರ್ಮಿಕರ ದುಡಿಮೆಗೆ ಅಡ್ಡಿಯಾದರೆ, ಅದರ ವಿರುದ್ಧ ಹೋರಾಟ ನಡೆದೇ ನಡೆಯುತ್ತದೆ. ಹಾಗಾದಾಗ ಕೆಲವು ಸಮಾಜ ದ್ರೋಹಿಗಳು ಅದರಲ್ಲಿ ಸೇರಿ ಕೊಂಡು ಹಿಂಸಾಕೃತ್ಯ ನಡೆಯುತ್ತದೆಂದು ಇಡೀ ಚಳುವಳಿಯನ್ನೆ ಖಂಡಿಸುವುದು ಸರಿಯಲ್ಲ.

ಚಳುವಳಿ ಹೂಡಬೇಕಾದಂಥ ಸಂದಿಗ್ಧ ಪರಿಸ್ಥಿತಿಯಾಕೆಉಂಟಾಯಿತೆಂಬುದನ್ನು ಅಭ್ಯಾಸಮಾಡಿ ಅದಕ್ಕೆ ಪರಿಹಾರ ಒದಗಿಸುವ ಕ್ರಮ ಕೈಗೊಳ್ಳುವುದು ಅತ್ಯಗತ್ಯ. ಈ ವಿಷಯದಲ್ಲಿ ಕೆ. ಇ. ಬಿ. ಯ ಆಡಳಿತೆಯನ್ನು ಸುಧಾರಿಸುವಲ್ಲಿ ಜನತಾ ಸರಕಾರ ವಿಫಲವಾಗಿದೆಂದು ಹೇಳಲೇ ಬೇಕಾಗಿದೆ. ಯಾಕೆಂದರೆ ನಾಗಝರಿಯ ಟರ್ಬೈನ್ ಕೆಟ್ಟು ಒಂದು ವರ್ಷದ ವರೆಗೂ ನಿದ್ರೆ ಮಾಡಿ ಅನಂತರ ಅದನ್ನು ರಿಪೇರಿ ಮಾಡಲು ಸಾಧ್ಯವಿದೆಯೇ ಎಂದು ತಿಳಿಯಲು ಬಿ. ಎಚ್. ಇ. ಎಲ್ ಕಂಪನಿಯನ್ನು ಕೇಳುವ ನಿರ್ಣಯಕ್ಕೆ ಬರಬೇಕಾದರೆ ಕೆ ಇ. ಬಿ ಯಲ್ಲಿ ಪೂರ್ಣ ದೋಷವಿದೆಂಬುದನ್ನು ಮಂತ್ರಿ ಪಟೇಲರು ಇನ್ನೂ ತಿಳಿದು ಕೊಳ್ಳದಿರುವುದು, ದೊಡ್ಡಬಳ್ಳಾಪುರದಂತ ಘಟನೆಗಳು ರಾಜ್ಯದ ಇತರೆಡೆಗಳಲ್ಲೂ ಘಟಿಸಲು ಅವಕಾಶ ಮಾಡಿ ಕೊಡಬಹುದಾಗಿದೆ. ಆದ್ದರಿಂದ ಎಚ್ಚರಿಕೆಯ ಪಾಠವನ್ನು ಮಂತ್ರಿ ಪಟೇಲರೂ, ಕೆ. ಇ. ಬಿ ಅಧಿಕಾರಿಗಳೂ ತುರ್ತಾಗಿ ಕಲಿತು ಕೊಳ್ಳುವುದು ಅತ್ಯಗತ್ಯ ವೆಂದು ಹೇಳಬಯಸುತ್ತೇವೆ.

ದೇಶವ್ಯಾಪೀ ಆಂದೋಲನದ ಆರಂಭ

[1ನೇ ಪುಟದಿಂದ]

ಹಿಡಿಯುತ್ತದೆ. ಅನಕ್ಷರತೆಯ ನಿವಾರಣೆಯ ಬಗ್ಗೆ ಮಾತನಾಡುವ ಕಾಂಗ್ರೆಸ್ (ಐ) ಕಾಂಗ್ರೆಯೇತರ ರಾಜ್ಯ ಸರಕಾರಗಳು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮೊತ್ತ ಮೀಸಲಿಟ್ಟರೆ ಅದನ್ನು ಖಂಡಿಸುತ್ತದೆ, ಶ್ರೀಮಂತರ ಬಳಕೆಯ ಸಾಮಗ್ರಿಗಳ ಮೇಲೆ ಅಬಕಾರಿ ಸುಂಕ ಇಳಿಸುವತ್ತ ಅದೇ ಹೊತ್ತಿಗೆ ಜನಸಾಮಾನ್ಯರ ನಿತ್ಯ ಬಳಕೆಯ ವಸ್ತುಗಳ ಬೆಲೆಯನ್ನು ತಾನೇ ಏರಿಸುತ್ತಿದೆ.

ಕಾಂಗ್ರೆಸ್ (ಐ) ಸರಕಾರದ ಧೋರಣೆಗಳಿಂದಾಗಿ ದುಡಿಯುವ ಜನರು ನಿರೀಕ್ಷಿಸುವ ಪ್ರಗತಿಸಾಧನೆಯಾಗುತ್ತಿಲ್ಲ ಬದಲಾಗಿ ಅವರ ಬವಣೆಗಳು ಸಹಿಸಲಸಾಧ್ಯವಾದ ಮಟ್ಟ ತಲುಪತ್ತಿದೆ ಅದೇ ವೇಳೆ ಭೂಮಾಲಿಕರು, ಸಗಟು ವ್ಯಾಪಾರಿಗಳು ದೊಡ್ಡ ಬಂಡವಾಳ ಶಾಹಿಗಳು ಜನಸಾಮಾನ್ಯರನ್ನು ಸುಲಿಯಲು ಇನ್ನಷ್ಟು ಅವಕಾಶಮಾಡಿ ಕೊಡಲಾಗುತ್ತಿದೆ ಎಂದು ನಿರ್ಣಯ ಕಟುವಾಗಿ ಟೀಕಿಸಿದೆ. ಇದರಿಂದಾಗಿ ಭ್ರಷ್ಟಾಚಾರ, ಕಪ್ಪು ಹಣದ ಪ್ರಭಾವ ಹೆಚ್ಚುತ್ತಿದೆ ಎಲ್ಲಾ ತರಹ ಸಮಾಜಘಾತುಕ ಶಕ್ತಿಗಳಿಗೆ ಪ್ರಭಾವೀ ವ್ಯಕ್ತಿಗಳ ರಕ್ಷಣೆ ದೊರೆಯುತ್ತಿದೆ ಎಂದು ನಿರ್ಣಯ ಕಳವಳ ವ್ಯಕ್ತಪಡಿಸಿದೆ. ಇವೆಲ್ಲದರ ವಿರುದ್ಧ ಜನಸಾಮಾನ್ಯರು ಅತೃಪ್ತಿ ವ್ಯಕ್ತಪಡಿಸಿದರೆ ಅದನ್ನು ದಮನಮಾಡಲು ಕರಾಳ ಶಾಸನಗಳನ್ನು ಬಳಸಲಾಗುತ್ತದೆ. ಅಸಂತೃಪ್ತಿಯ ಸ್ವರೂಪಕ್ಕೆ ರಾಷ್ಟ್ರ ವಿರೋಧಿ ಚಟುವಟಿಕೆಯೆಂದು ಹಣೆಪಟ್ಟಿ ಹಚ್ಚಲಾಗುತ್ತಿದೆ ಈ ಎಲ್ಲಾ ಅಪಾಯಕಾರೀ ಪ್ರವೃತ್ತಿಗಳ ರುದ್ಧ ಮತ್ತು ದೇಶದ ಹಾಗೂ ಜನತೆಯ ಹಿತರಕ್ಷಣೆಗಾಗಿ ದೃಢ ಹೋರಾಟ ನಡೆಸಲು ಸಮ್ಮೇಳನದಲ್ಲಿ ಭಾಗವಹಿಸಿದ ಪಕ್ಷಗಳೆಲ್ಲವೂ ಪ್ರತಿಜ್ಞೆ ತೊಡುತ್ತವೆ ಎಂದು ನಿರ್ಣಯ ಸಾರಿದೆ

ಬೇಡಿಕೆಗಳು

1 ಸಗಟು ವ್ಯಾಪಾರಿಗಳ ಲಾಭಾಂಶವನ್ನು ಕಡಿತ ಗೊಳಿಸಿ, 'ವ್ಯಾಪಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ಸಾಮಗ್ರಿಗಳನ್ನು ನ್ಯಾಯ ಬೆಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪೂರೈಸುವ ಭರವಸೆಯನ್ನು ಕೇಂದ್ರ ಸರಕಾರ ನೀಡಬೇಕು ಇದು ಕೈಗೂಡಬೇಕಾದರೆ ಬಡವರು ಹಾಗೂ ಮಧ್ಯಮ ವರ್ಗದ ಜನ ಬಳಸುವ ಸಾಮಗ್ರಿಗಳ ಉತ್ಪಾದನೆಗೆ ಆದ್ಯತೆ ನೀಡಬೇಕು; ಅಂತಹ ಉತ್ಪಾದನೆಗಳಿಗೆ ಸರಕಾರ ಸಹಾಯ ಧನ ನೀಡಬೇಕು; ಅವುಗಳ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಿ ಅವುಗಳ ಸಾಗಾಣಿಕೆಗೆ ಪ್ರಥಮ ಆದ್ಯತೆ ನೀಡಬೇಕು

2 ಸರಕಾರಿ ಸಂಸ್ಥೆಗಳ ಮೂಲಕ ಸಾಕಷ್ಟು ಖರೀದಿ ನಡೆಸಿ ಕೃಷಿ ಉತ್ಪಾದನೆಗಳಿಗೆ ಫಲಕಾರೀ ಬೆಲೆ ನೀಡಬೇಕು

3 ಜನ ಸಾಮಾನ್ಯರ ಬಳಕೆಯ ಸಾಮಗ್ರಿಗಳ ಉತ್ಪಾದನೆ ಹೆಚ್ಚಿಸಲು ಸಣ್ಣ ಕುಶಲ ಕರ್ಮಿಗಳು ಸೇರಿದಂತೆ ಎಲ್ಲರಿಗೂ, ಉದ್ಯೋಗಾವಕಾಶಗಳನ್ನು ವಿಸ್ತರಿಸಲು ಸಾಧ್ಯವಾಗುವಂತೆ ಆರ್ಥಿಕ ಧೋರಣೆಗಳನ್ನು ಪುನರ್ರೂಪಿಸಬೇಕು

4 ಕೂಲಿಗಾಗಿ ಕಾಳು ಯೋಜನೆಯನ್ನು ಪುನರಾರಂಭಿಸಿ ಅದನ್ನು ವಿಸ್ತರಿಸಬೇಕು

5 ಕೆಲಸದ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸೇರಿಸಬೇಕು

6 ಈಗಿರುವ ಭೂ ಸುಧಾರಣಾ ಶಾಸನಗಳ ಎಂದು ಕೊರತೆಗಳನ್ನು ನೀಗಿಸಿ ತೀವ್ರವಾಗಿ ಅವನ್ನು ಜಾರಿಗೊಳಿಸಬೇಕು. ರಾಜ್ಯ ವಿಧಾನ ಮಂಡಲ ಅಂಗೀಕರಿಸಿದ ಭೂ ಸುಧಾರಣಾ ಮಸೂದೆಗಳಿಗೆ ಕೂಡಲೇ ಒಪ್ಪಿಗೆ ನೀಡಬೇಕು.

7 ರೈತರಿಗೆ ಸುಲಭ ದರದಲ್ಲಿ ಸಾಲ ಹಾಗೂ ಕೃಷಿ ಸಲಕರಣೆಗಳನ್ನು ಒದಗಿಸಬೇಕು.

8 ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಿ, ಗ್ರಾಮೀಣ ಜನತೆಯ ಜೀವನ ಹಾಗೂ ಕೆಲಸದ ಪರಿಸ್ಥಿತಿ ಸುಧಾರಿಸಲು ಕ್ರಮ ಕೈಗೊಳ್ಳಬೇಕು

9 ಕೇಂದ್ರ ಸರಕಾರ ತನ್ನ ಕಾರ್ಮಿಕ-ವಿರೋಧಿ ಧೋರಣೆಗಳನ್ನು ಬಿಟ್ಟು ಬಿಡಬೇಕು, ಎನ್. ಎಸ್ ಎ ಎಸ್ಮಾ ಇತ್ಯಾದಿ ಕರಾಳ ಶಾಸನಗಳನ್ನು ರದ್ದುಗೊಳಿಸಬೇಕು; ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿ ರೂಪಿಸಿದ ಬೇಡಿಕೆಗಳನ್ನು ಒಪ್ಪಿಕೊಳ್ಳ ಬೇಕು; ಕೈಗಾರಿಕೆಗಳನ್ನು ಮುಚ್ಚುವುದನ್ನು ಮತ್ತು ಬೀಗಮುದ್ರೆ ತಡೆಯಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು.

10 ಆರ್ಥಿಕ ಸ್ವಾವಲಂಬನೆಯ ರಾಷ್ಟ್ರೀಯ ನೀತಿಯನ್ನು ಪುನಃ ಸ್ಥಾಪಿಸಬೇಕು; ಬಡವರು ಹಾಗೂ ಕಾರ್ಮಿಕ ವರ್ಗಗಳ ಹಿತಾಸಕ್ತಿಗಳನ್ನು ಬಲಿಗೊಟ್ಟು ಗುತ್ತೇದಾರಗಳು ಮತ್ತು ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವ ಆರ್ಥಿಕ, ಹಣಕಾಸಿನ ಮತ್ತು ಬಂಡವಾಳ ವಿನಿಯೋಗದ ಧೋರಣೆಗಳನ್ನು ತ್ಯಜಿಸಬೇಕು

11 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗಗಳು, ಧಾರ್ಮಿಕ ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಸಮಾಜದ ಇತರ ದುರ್ಬಲ ವಿಭಾಗಗಳ ಮೇಲೆ ಇನ್ನೂ ನಡೆಯುತ್ತಿರುವ ಆರ್ಥಿಕ ಅನ್ಯಾಯಗಳು ಹಾಗೂ ದೈಹಿಕ ಹಲ್ಲೆಗಳ ವಿರುದ್ಧ ಬಲಯುತವಾದ ಕ್ರಮ ಕೈಗೊಳ್ಳಬೇಕು.

ಎಲ್ಲಾ ಪ್ರಜಾಪ್ರಭುತ್ವವಾದಿ ಪಕ್ಷಗಳು ಸಂಘಟನೆಗಳು, ವ್ಯಕ್ತಿಗಳು ಮತ್ತು ಆಳುವ ಪಕ್ಷದೊಳಗೇನೇ ತಮ್ಮ ಪಕ್ಷ ಕಾರ್ಯ ನಿರ್ವಹಿಸುತ್ತಿರುವ ವಿಧಾನದಿಂದ ಕಂಗೆಟ್ಟವರು ಕೂಡಾ ಈ ಬೇಡಿಕೆಗಳನ್ನು ಬೆಂಬಲಿಸಿ ತಮ್ಮ ದನಿ ಎತ್ತಬೇಕೆಂದು ಕಲ್ಕತ್ತಾ ಸಮ್ಮೇಳನ ಮನವಿ ಮಾಡಿಕೊಂಡಿದೆ.

ಜನತೆಯ ಸಂಕಲ್ಪ

ಈ ಮಹತ್ವಪೂರ್ಣ ನಿರ್ಣಯವಲ್ಲದೆ ಕಲ್ಕತ್ತಾ ಸಮ್ಮೇಳನ ರಾಜ್ಯ ಸರಕಾರಗಳನ್ನು ಉರುಳಿಸುವ ಕಾಂಗ್ರೆಸ್ [ಐ] ತಂತ್ರಗಳನ್ನು ಖಂಡಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳಿಗೆ ಭದ್ರತೆಯ ಭಾವನೆ ಉಂಟು ಮಾಡಲು ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿ, ಜವಳಿ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಟಿ ರಾಮರಾವ್ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಿತು

ಫೆಬ್ರವರಿ 13 ರಿಂದ ಆರಂಭವಾಗಲಿರುವ ದೇಶವ್ಯಾಪಿ ಆಂದೋಲನದಲ್ಲಿ ಕರ್ನಾಟಕ ಹಾಗೂ ಇತರ ಎಲ್ಲ ರಾಜ್ಯಗಳಲ್ಲೂ ಇದೇ ಮಾದರಿಯಲ್ಲಿ ಕಾಂಗ್ರೆಸ್ (ಐ) ಕೇಂದ್ರ ಸರಕಾರದ ಜನವಿರೋಧಿ ಧೋರಣೆಗಳು ಹಾಗೂ ವರ್ತನೆಗಳ ವಿರುದ್ಧ ಜನಸಾಮಾನ್ಯರನ್ನು ಸಂಘಟಿಸಲು ಪ್ರಯತ್ನಿಸಲಾಗುತ್ತಿದೆ. ಯಾಕೆಂದರೆ ಕಲ್ಕತ್ತಾ ಸಮ್ಮೇಳನದ ನಿರ್ಣಯ ಹೇಳುವಂತೆ ಐಕ್ಯ ಭಾವದಿಂದ ಜನತೆ ವ್ಯಕ್ತಪಡಿಸುವ ಸಂಕಲ್ಪ ಮಾತ್ರ ಈ ಧೋರಣೆಗಳನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ.

Printed & Published by P. Ramachandra Rao by him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone: 24154
Editor: P. Ramachandra Rao